ಕರ್ನಾಟಕ ಸರ್ಕಾರ

# ಜವಳಿ ಇಲಾಖೆಯಲ್ಲಿನ ನೇಕಾರರ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆ ಅಡಿಯಲ್ಲಿ ವಿವಿಧ ಕಾಂಪೋನೆಂಟ್‌ಗಳ ಅನುಷ್ಠಾನದ ಬಗ್ಗೆ ಮಾರ್ಗಸೂಚಿ

## ವಾಕೈ 126 ಜಕೈಯೋ 2014, ದಿನಾಂಕ:02.03.2015.

ರಾಜ್ಯದಲ್ಲಿ, ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಜವಳಿ ಕ್ಷೇತ್ರದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇತ್ತೀಚಿನ ಮಾರುಕಟ್ಟೆಯ ಬೆಲೆಯ ಏರುಪೇರಿನಿಂದ ಯಂತ್ರೋಪಕರಣಗಳ/ಸಾಮಗ್ರಿಗಳ ಬೆಲೆಯು ಹೆಚ್ಚಾಗಿದ್ದು, ಹಳೆಯ ಘಟಕ ವೆಚ್ಚದ ದರದಲ್ಲಿ ಫಲಾನುಭವಿಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ಖರೀದಿಸಿ ಅವರ ವೃತ್ತಿಯನ್ನು ಸುಲಲಿತವಾಗಿ ನಡೆಸಲು ಆರ್ಥಿಕವಾಗಿ ಸದೃಢರಾಗಿಲ್ಲದ ಕಾರಣ ಮತ್ತು ಜಿಲ್ಲೆಗಳಿಂದ ಇತ್ತೀಚಿನ ಮಾರುಕಟ್ಟೆಯ ಬೆಲೆಗೆ ಸಮನಾಂತರವಾಗಿ ಘಟಕ ವೆಚ್ಚವನ್ನು ಪರಿಷ್ಕರಿಸಲು ಬೇಡಿಕೆ ಇರುತ್ತದೆ. ಈ ಹಿನ್ನಲೆಯಲ್ಲಿ 2014-15ನೇ ಸಾಲಿನಿಂದ ಜಾರಿಗೆ ಬರುವಂತೆ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡದ ಉಪಯೋಜನೆಯಡಿ ನಿಗದಿಪಡಿಸಿರುವ ಉಪ ಕಾರ್ಯಕ್ರಮಗಳಿಗೆ ಘಟಕ ವೆಚ್ಚವನ್ನು ಪರಿಷ್ಕರಿಸಿ ಜಾರಿಗೊಳಿಸಲು ವಿವರವಾದ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲಾಗಿತ್ತು.

2014-15ನೇ ಸಾಲಿನಿಂದ ಯೋಜನೆಯನ್ನು ಜಾರಿಗೊಳಿಸಲು ಸಮಾಜ ಕಲ್ಯಾಣ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಕಇ 276 ಎಸ್‌ಎಲ್‌ಪಿ 2014 (ಭಾಗ-1) ದಿನಾಂಕ:06-11-2014ರಲ್ಲಿ, 2014-15ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾಗಿರುವ ಅನುದಾನ ಕುರಿತು ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ, 2013ರನ್ವಯ ದಿನಾಂಕ 10.10.2014ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಅಭಿವೃದ್ಧಿ ಪರಿಷತ್ತಿನ (State Council) ಸಭೆಯಲ್ಲಿ ಜವಳಿ ಇಲಾಖೆಗೆ ಸಂಬಂಧಿಸಿದಂತೆ ಕೆಳಗೆ ನಮೂದಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಅನುಮೋದನೆಯನ್ನು ನೀಡಿದೆ. ಅದರಂತೆ, ಕಾರ್ಯಕ್ರಮವಾರು ಮಾರ್ಗಸೂಚಿ ಈ ಕೆಳಕಾಣಿಸಿದಂತಿರುತ್ತದೆ.

**ಫಲಾನುಭವಿಗಳು :**

ಅ) ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಾಗಿರತಕ್ಕದ್ದು.

ಆ) ಕರ್ನಾಟಕ ರಾಜ್ಯದಲ್ಲಿರುವ ಮತ್ತು ನಿಯಮಾನುಸಾರ ನೋಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೈಮಗ್ಗ ನೇಕಾರರ ಸಹಕಾರ ಸಂಘ, ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘ, ನೊಂದಾಯಿತ ಎಸ್.ಪಿ.ವಿ. ಸಂಸ್ಥೆ, ವಿವಿಧೋದ್ದೇಶಗಳ ಸಹಕಾರ ಸಂಘ, ಸ್ವಯಂ ಸೇವಾ ಸಹಕಾರ ಸಂಘ, ಮಹಿಳಾ ಸೇವಾ ಸಹಕಾರ ಸಂಘ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳಾಗಿರತಕ್ಕದ್ದು.

..2

ಇ) **ಮೂಲಭೂತ ಸೌಕರ್ಯಗಳು**: ಸಾಮೂಹಿಕ ಕ್ಾರ್ಯಕ್ರಮಗಳಾದ ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ, ಸಂಚಾರಿ ಮಾರುಕಟ್ಟೆ ವಾಹನ / ಮಾರಾಟ ಮಳಿಗೆ ನಿರ್ಮಾಣ, ಜನರೇಟರ್ ಸೆಟ್ ಖರೀದಿ, ಬಣ್ಣದ ಮನೆ ನಿರ್ಮಾಣ, ಸೈಜಿಂಗ್ ಘಟಕ ಸ್ಥಾಪನೆ, ನೇಕಾರರ ಕಾಲೋನಿ ಅಭಿವೃದ್ಧಿ ಪಡಿಸುವುದು, ಸಹಕಾರ ಸಂಘಗಳಿಗೆ ಶೇರು ಬಂಡವಾಳ ಮತ್ತು ಮಗ್ಗ ಪೂರ್ವ ಸೌಲಭ್ಯಗಳು ಮುಂತಾದ ಮೂಲಭೂತ ಸೌಕರ್ಯಗಳನ್ನು ನೀಡುವಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ನೊಂದಾಯಿಸಿರುವ ನೂರಕ್ಕೆ ನೂರರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರುವ ಮತ್ತು ಅವರ ಹಿತರಕ್ಷಣೆ / ಕಲ್ಯಾಣಕ್ಕಾಗಿ ಸ್ಥಾಪಿಸಿರುವ ಸಂಘ-ಸಂಸ್ಥೆಗಳಿಗೆ ಮಾತ್ರ ನೀಡತಕ್ಕದ್ದು.

ಈ) ಈ ಯೋಜನೆಯಡಿ ಬರುವ ಉಪ ಕಾಂಪೋನೆಂಟ್‌ಗಳಾದ ತರಬೇತಿ, ವಿದ್ಯುತ್‌ಮಗ್ಗಗಳನ್ನು ಕೈಮಗ್ಗಗಳನ್ನು ಒದಗಿಸುವುದು. ಸುಧಾರಿತ ಮಗ್ಗದ ಸಲಕರಣೆಗಳು, ಉತ್ಪಾದನೆಗೆ ದುಡಿಮೆ ಬಂಡವಾಳ, ಹೊಸ ಸದಸ್ಯರಿಗೆ ಶೇರು ಮೊತ್ತ, ವಸತಿ ಕಾರ್ಯಾಗಾರ ಮತ್ತು ಕಾರ್ಯಾಗಾರ ಮುಂತಾದ ಕಾರ್ಯಕ್ರಮಗಳನ್ನು ನೇರವಾಗಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಮಾತ್ರ ನೀಡತಕ್ಕದ್ದು. ಈ ಸೌಲಭ್ಯಗಳನ್ನು ಯಾವುದೇ ನೊಂದಾಯಿತ ಸಹಕಾರ ಸಂಘ - ಸಂಸ್ಥೆಗಳ ಮೂಲಕ ನಿರ್ವಹಿಸತಕ್ಕದ್ದಲ್ಲ.

ಉ) ಈ ಯೋಜನೆಯಡಿ ಬರುವ ಸವಲತ್ತುಗಳನ್ನು ಒಂದು ಬಾರಿಗೆ ಮಾತ್ರ ಅರ್ಹ ಫಲಾನುಭವಿಗೆ ಮಾತ್ರ ನೀಡತಕ್ಕದ್ದು. ಒಮ್ಮೆ ನೀಡಿದ ಸವಲತ್ತನ್ನು ಪುನರಾವರ್ತಿ ಮಾಡುವಂತಿಲ್ಲ.

ಊ) **ಪ್ರಸ್ತಾವನೆ**: ಜಿಲ್ಲಾ ಮಟ್ಟದ ಅಧಿಕಾರಿಗಳು ನಿಯಮಾನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾರ್ಗಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ದಾಖಲಾತಿಗಳನ್ನು ಪಡೆದು ಪ್ರತಿ ಕಾಂಪೋನೆಂಟ್‌ಗೆ ಪ್ರತ್ಯೇಕವಾಗಿ ಫಲಾನುಭವಿಯ ವಿವರಗಳೊಂದಿಗೆ ಅರ್ಹತೆಯನ್ನು ದೃಢೀಕರಿಸಿ ಮಂಜೂರಾತಿಗೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡತಕ್ಕದ್ದು.

ಋ) ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಯೋಜನೆ ಅನುಷ್ಠಾನ ಸಮಿತಿ ರಚಿಸಿ, ಜಿಲ್ಲಾ ಮಟ್ಟದಿಂದ ಶಿಫಾರಸ್ಸಾದ ಪ್ರಸ್ತಾವನೆಗಳ ಬಗ್ಗೆ ತಾಂತ್ರಿಕವಾಗಿ ಪರಿಶೀಲಿಸಿ, ಅರ್ಹ ಪ್ರಸ್ತಾವನೆಯನ್ನು ಆಯ್ಕೆಮಾಡಿ ಅನುದಾನ ಮಂಜೂರಾತಿ ಮಾಡತಕ್ಕದ್ದು. ಅವಶ್ಯವಿರುವ ಪ್ರಸ್ತಾವನೆಗಳಿಗೆ ಮಾತ್ರ ಸರ್ಕಾರದಿಂದ ಅನುಮೋದನೆ ಪಡೆಯತಕ್ಕದ್ದು.

ಎ) ಯಂತ್ರೋಪಕರಣಗಳ ಸರಬರಾಜಿಗೆ ಸಂಬಂಧಿಸಿದಂತೆ ಅಧಿಕೃತ ಉತ್ಪಾದಕರ ಕಂಪನಿಗಳನ್ನು ಗುರುತಿಸಿ, ಯಂತ್ರೋಪಕರಣಗಳ ತಾಂತ್ರಿಕ ಮಾಹಿತಿಗಳ (Specification)ನ್ನು ಗುಣಮಟ್ಟ ಮತ್ತು ಬೆಲೆಯನ್ನು, ಪಟ್ಟಿಮಾಡಿ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಸಮಿತಿಯಲ್ಲಿ ತೀರ್ಮಾನಗೊಂಡು ಅಧಿಕೃತ ಸರಬರಾಜುದಾರರ ಪಟ್ಟಿಯನ್ನು ಘೋಷಿಸಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತಿಳಿಸತಕ್ಕದ್ದು. ಜಿಲ್ಲಾ ಮಟ್ಟದ ಅಧಿಕಾರಿಗಳು ಅಧಿಕೃತ ಸರಬರಾಜುದಾರರಿಂದ ಪಾರದರ್ಶಕ ನಿಯಮಗಳನ್ನು ಪಾಲಿಸಿ ಯಂತ್ರೋಪಕರಣಗಳನ್ನು ಖರೀದಿಸತಕ್ಕದ್ದು.

**ಸುಧಾರಿತ ಮಗ್ಗಗಳು ಮತ್ತು ಉಪಕರಣಗಳ ಸರಬರಾಜು:-**

**ಉದ್ದೇಶ**: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಸುಧಾರಿತ ಕೈಮಗ್ಗಗಳು, ವಿದ್ಯುತ್‌ಮಗ್ಗಗಳು ಹಾಗೂ ಆಧುನಿಕ ಉಪಕರಣಗಳನ್ನು ಅಳವಡಿಸಿ, ಹೊಸ ಘಟಕಗಳನ್ನು ಸ್ಥಾಪಿಸುವುದರ ಮೂಲಕ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ನೆರವು ನೀಡತಕ್ಕದ್ದು. ಇದಕ್ಕಾಗಿ ಶೇ. 90 ರಷ್ಟು ಸಹಾಯಧನ ಮತ್ತು ಶೇ.10 ಫಲಾನುಭವಿಯ ವಂತಿಕೆ ನಿಗದಿಪಡಿಸತಕ್ಕದ್ದು.

1. ಕೈಮಗ್ಗಗಳು : *ಯೋಜನಾ ಮೊತ್ತದ ವಿವರಗಳು:*
   ಎ. ಸರ್ಕಾರದ ಗರಿಷ್ಠ ಸಹಾಯಧನ – ರೂ.27000/-
   ಬಿ. ಫಲಾನುಭವಿಯ ವಂತಿಕೆ / ಸಾಲ – ರೂ.3000/-
   ಪ್ರತಿ ಕೈಮಗ್ಗಕ್ಕೆ ತಗಲುವ ಒಟ್ಟು ಮೊತ್ತ ರೂ.30000/-

2. ಜೈನ್ ಜಕಾರ್ಡ್ ಒಳಗೊಂಡಂತೆ ಸಾಧಾರಣ ವಿದ್ಯುತ್‌ಚಾಲಿತ ಮಗ್ಗಗಳು –
   ಎ. ಸರ್ಕಾರದ ಗರಿಷ್ಠ ಸಹಾಯಧನ – ರೂ.1,35,000/-
   ಬಿ. ಫಲಾನುಭವಿಯ ವಂತಿಕೆ / ಸಾಲ – ರೂ.15,000/-
   ಪ್ರತಿ ಸಾಧಾರಣ ವಿದ್ಯುತ್‌ಚಾಲಿತ ಮಗ್ಗದ ಒಟ್ಟು ಮೊತ್ತ – ರೂ.1,50,000/-

3. ಜೈನ್‌ಜಕಾರ್ಡ್ ಒಳಗೊಂಡಂತೆ ಸೆಮಿ ಆಟೋಮ್ಯಾಟಿಕ್ ವಿದ್ಯುತ್‌ಚಾಲಿತ ಮಗ್ಗಗಳು –
   ಎ. ಸರ್ಕಾರದ ಗರಿಷ್ಠ ಸಹಾಯಧನ – ರೂ.2,25,000/-
   ಬಿ. ಫಲಾನುಭವಿಯ ವಂತಿಕೆ / ಸಾಲ – ರೂ.25,000/-
   ಪ್ರತಿ ಸೆಮಿ ಆಟೋಮ್ಯಾಟಿಕ್ ವಿದ್ಯುತ್‌ಚಾಲಿತ ಮಗ್ಗದ ಒಟ್ಟು ಮೊತ್ತ – ರೂ.2,50,000/-

ಅರ್ಹತೆಗಳು :

1) ಫಲಾನುಭವಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
2) ಕೈಮಗ್ಗ ಅಥವಾ ವಿದ್ಯುತ್‌ಚಾಲಿತ ಮಗ್ಗಗಳ ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿರಬೇಕು.
3) ಅಸಂಘಟಿತ ವಲಯ, ಸಹಕಾರ ಸಂಘ / ಸಂಸ್ಥೆಗಳಲ್ಲಿ ನೊಂದಾಯಿತ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ಮತ್ತು ಸಂಘಟಿತ ವಲಯದ ಫಲಾನುಭವಿಗಳಾಗಿರತಕ್ಕದ್ದು.
4) ಮಗ್ಗ ಸ್ಥಾಪಿಸಲು ಫಲಾನುಭವಿ ಹೆಸರಿನಲ್ಲಿ (ಸ್ವಂತ/ಲೀಸ್ ಆಧಾರದಲ್ಲಿ) ಸ್ಥಳ ಹೊಂದಿರತಕ್ಕದ್ದು.

ಪ್ರಸ್ತಾವನೆಯ ದಾಖಲಾತಿಗಳು:

1) ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ
2) ಫಲಾನುಭವಿ ಭಾವಚಿತ್ರ.
3) ಜಾತಿ ಪ್ರಮಾಣ ಪತ್ರದ ದೃಢೀಕರಣ ಪ್ರತಿ.
4) ಯಂತ್ರೋಪಕರಣಗಳ ಕೊಟೇಷನ್ / ದರ ಪಟ್ಟಿ.
5) ಯೋಜನಾ ವರದಿ.
6) ಘಟಕ ಸ್ಥಾಪಿಸಲು ಜಾಗದ ಲಭ್ಯತೆಯ / ವರ್ಕ್ ಶೆಡ್ ದಾಖಲೆ, ಸಂಬಂಧಿಸಿದ ಇಲಾಖೆಯಿಂದ ಘಟಕಕ್ಕೆ ಅವಶ್ಯವಿರುವ ವಿದ್ಯುತ್ ಮಂಜೂರಾತಿ ಹಾಗೂ ವಿದ್ಯುತ್ ಸಂಪರ್ಕ ದೃಢೀಕರಣ ಪತ್ರ.

—4

**ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :**

- ಘಟಕ ವೆಚ್ಚದಲ್ಲಿ ನಿರ್ದಿಷ್ಟ ಪಡಿಸಿರುವ ಶೇ.10 ರಷ್ಟು ವಂತಿಕೆಯನ್ನು ಫಲಾನುಭವಿಯು ಮುಂಗಡವಾಗಿ ಯಂತ್ರೋಪಕರಣಗಳ ಸರಬರಾಜುದಾರರಿಗೆ ಪಾವತಿಸಲು ಬದ್ಧರಿರಬೇಕು. ಹಾಗೂ ಮುಂಗಡ ಪಾವತಿಸಿರುವ ಬಗ್ಗೆ ಖಾತರಿ ಪಡಿಸತಕ್ಕದ್ದು.
- ಸರ್ಕಾರದ ಗರಿಷ್ಟ ಸಹಾಯಧನ ಶೇ.90 ರಷ್ಟು ಮೊತ್ತವನ್ನು ಯಂತ್ರೋಪಕರಣಗಳ ಅಧಿಕೃತ ಡೀಲರ್ / ಏಜೆನ್ಸಿಗಳು ಫಲಾನುಭವಿಯ ಜಾಗಕ್ಕೆ ಸರಬರಾಜು ಮಾಡಿದ ನಂತರ ಖಾತ್ರಿ ಪಡಿಸಿಕೊಂಡು ಮಗ್ಗಗಳನ್ನು ಸ್ಥಾಪಿಸಿ ಟ್ರಯಲ್ ಕಾರ್ಯಚರಣೆ ಮಾಡಿದ ನಂತರ ಜಿಲ್ಲಾ ಮಟ್ಟದ ಅಧಿಕಾರಿಗಳು ನೇರವಾಗಿ ಸರಬರಾಜುದಾರರಿಗೆ ಹಣ ಬಿಡುಗಡೆ ಮಾಡತಕ್ಕದ್ದು.
- ವಿಶೇಷ ಪ್ರಕರಣಗಳಲ್ಲಿ ಸರಬರಾಜುದಾರರಿಗೆ ಕರಾರು ಒಪ್ಪಂದದ ಒಡಂಬಡಿಕೆ ಮಾಡಿಕೊಂಡು ಶೇ.25 ರಷ್ಟು ಮೀರದಂತೆ ಮುಂಗಡ ಪಾವತಿಸುವುದು.
- ಕ್ಷೇತ್ರ ಮಟ್ಟದಲ್ಲಿ ಫಲಾನುಭವಿ ಮಗ್ಗಗಳನ್ನು ಉತ್ಪಾದನೆಗೆ ತೊಡಗಿಸಿರುವ ಬಗ್ಗೆ ಆಗಿಂದಾಗ್ಗೆ ಸ್ಥಳ ಪರಿಶೀಲನೆ ನಡೆಸಿ ವರದಿಯಲ್ಲಿ ದಾಖಲಿಸುವುದು ಹಾಗೂ ಮಾರ್ಗದರ್ಶನ ನೀಡುವುದು.
- ಯಂತ್ರೋಪಕರಣಗಳ ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

**ಇತರೆ ನಿಯಮಗಳು :**

1) ಯಂತ್ರೋಪಕರಣಗಳನ್ನು ಮಂಜೂರಾತಿ ಪ್ರಾಧಿಕಾರದ ಅನುಮತಿ ಇಲ್ಲದೆ ಪರಬಾರೆ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ. (ನಿಯಮ ಉಲ್ಲಂಘಿಸಿದ್ದಲ್ಲಿ ಕಾನೂನು ಕ್ರಮ ಜರುಗಿಸಿ ವಸೂಲಾತಿ ಕ್ರಮ ಜರುಗಿಸುವುದು ಜಿಲ್ಲಾಮಟ್ಟದ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.)
2) ಯಂತ್ರೋಪಕರಣಗಳ ಉಪಯುಕ್ತತೆ ಮತ್ತು ಅವುಗಳನ್ನು ಪರಬಾರೆ ಮಾಡದೇ ಇರುವ ಬಗ್ಗೆ ಕರಾರು ಮುಚ್ಚಳಿಕೆ ಪತ್ರ ಸಲ್ಲಿಸತಕ್ಕದ್ದು. (ನಿಯಮ ಉಲ್ಲಂಘಿಸಿದ್ದಲ್ಲಿ ಕಾನೂನು ಕ್ರಮ ಜರುಗಿಸಿ ವಸೂಲಾತಿ ಕ್ರಮ ಜರುಗಿಸುವುದು ಜಿಲ್ಲಾಮಟ್ಟದ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ.)
3) ಘಟಕ ವೆಚ್ಚಕ್ಕಿಂತ ಹೆಚ್ಚುವರಿ ಮೊತ್ತವನ್ನು ಫಲಾನುಭವಿ ಭರಿಸತಕ್ಕದ್ದು.
4) ಫಲಾನುಭವಿಯು ನಿರಂತರ ಉದ್ಯೋಗ ಮತ್ತು ಉತ್ಪಾದನೆಯಲ್ಲಿ ತೊಡಗಿರಬೇಕು.
5) ಒಂದು ಕುಟುಂಬದಲ್ಲಿ ಒಬ್ಬ ಪಲಾನುಭವಿಗೆ 1 ಘಟಕ/ಗರಿಷ್ಠ 2 ಮಗ್ಗಗಳು ಮಾತ್ರ ನೀಡತಕ್ಕದ್ದು.

**ಉತ್ಪಾದನಾ ವಹಿವಾಟಿಗೆ ದುಡಿಮೆ ಬಂಡವಾಳ**

**ಉದ್ದೇಶ :** ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳಲ್ಲಿ ನೇಕಾರಿಕೆ ಚಟುವಟಿಕೆಗಳ ಉತ್ಪಾದನೆಯಲ್ಲಿ ಹೆಚ್ಚಳ ಮಾಡಲು ಮತ್ತು ನಿರಂತರವಾಗಿ ವೃತ್ತಿಯನ್ನು ಮುಂದುವರಿಸಲು ಕಚ್ಚಾಮಾಲುಗಳಾದ ರೇಷ್ಮೆ ನೂಲು, ಹತ್ತಿ ನೂಲು, ಪಾಲಿಯೆಸ್ಟರ್ ನೂಲು, ರಾಸಾಯನಿಕ ವಸ್ತುಗಳು ಮುಂತಾದ ಸರಕುಗಳನ್ನು ಖರೀದಿಸಲು ಮಾರುಕಟ್ಟೆ ಹಾಗೂ ಉತ್ಪಾದನಾ ವಹಿವಾಟಿಗಾಗಿ ಪ್ರತಿ ಫಲಾನುಭವಿಗೆ ದುಡಿಮೆ ಬಂಡವಾಳ ಒದಗಿಸತಕ್ಕದ್ದು. ಇದಕ್ಕಾಗಿ ಶೇ. 90 ರಷ್ಟು ಸಹಾಯಧನ ಮತ್ತು ಶೇ.10 ಫಲಾನುಭವಿಯ ವಂತಿಕೆ ನಿಗದಿಪಡಿಸಲಾಗಿದೆ.

--5

<u>ಯೋಜನಾ ಮೊತ್ತದ ವಿವರ</u> :

4. ಕೈಮಗ್ಗಗಳು (ದುಡಿಮೆ ಬಂಡವಾಳ) :
   1. ಸರ್ಕಾರದ ಗರಿಷ್ಠ ಸಹಾಯಧನ – ರೂ.22,500/-
   2. ಫಲಾನುಭವಿಯ ವಂತಿಕೆ – ರೂ.2500/-

   ಪ್ರತಿ *ಕೈಮಗ್ಗ* ವೊಂದಕ್ಕೆ ಒಟ್ಟು ಮೊತ್ತ– ರೂ.25,000/-

5. ವಿದ್ಯುತ್‌ಮಗ್ಗಗಳು (ದುಡಿಮೆ ಬಂಡವಾಳ) :
   1. ಸರ್ಕಾರದ ಗರಿಷ್ಠ ಸಹಾಯಧನ – ರೂ.45000/-
   2. ಫಲಾನುಭವಿಯ ವಂತಿಕೆ – ರೂ.5000/-

   ಪ್ರತಿ ***ವಿದ್ಯುತ್‌ಚಾಲಿತಮಗ್ಗ*** ವೊಂದಕ್ಕೆ ಒಟ್ಟು ಮೊತ್ತ – ರೂ.50,000/-

<u>ಅರ್ಹತೆಗಳು:</u>

1) ಫಲಾನುಭವಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
2) ಕೈಮಗ್ಗ ಅಥವಾ ವಿದ್ಯುತ್‌ಚಾಲಿತ ಮಗ್ಗಗಳಲ್ಲಿ ನೇಯ್ಗೆ ಚಟುವಟಿಕೆಗಳಲ್ಲಿ ತೊಡಗಿರಬೇಕು.
3) ಅಸಂಘಟಿತ ವಲಯ, ಸಹಕಾರ ಸಂಘ / ಸಂಸ್ಥೆಗಳಲ್ಲಿ ನೊಂದಾಯಿತ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ~~ಮತ್ತು ಸಂಘಟಿತ ವಲಯದ ಫಲಾನುಭವಿಗಳು ಆಗಿರತಕ್ಕದ್ದು.~~

<u>ಪ್ರಸ್ತಾವನೆಯ ದಾಖಲಾತಿಗಳು:</u>

1) ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ
2) ಫಲಾನುಭವಿ ಭಾವಚಿತ್ರ.
3) ಜಾತಿ ಪ್ರಮಾಣ ಪತ್ರದ ದೃಢೀಕರಣ ಪ್ರತಿ.
4) ~~ಕಚ್ಚಾಮಾಲು ವಿವರಗಳ ಬೇಡಿಕೆ ಪಟ್ಟಿ~~
5) ಯೋಜನಾ ವರದಿ.
6) ದುಡಿಮೆ ಬಂಡವಾಳವನ್ನು ಮಂಜೂರಾದ ಉದ್ದೇಶಕ್ಕೆ ಮಾತ್ರ ಉಪಯೋಗಿಸುವುದಾಗಿ ಕರಾರು ಒಪ್ಪಂದವನ್ನು ಫಲಾನುಭವಿಯಿಂದ ಪಡೆಯತಕ್ಕದ್ದು.

<u>ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :</u>

- <u>ಹತ್ತಿ ನೂಲು, ರೇಷ್ಮೆ ನೂಲು, ಪಾಲಿಯೆಸ್ಟರ್ ನೂಲು, ಉಣ್ಣೆ ಇತರೆ ನೂಲು ಮತ್ತು ರಾಸಾಯನಿಕ ವಸ್ತುಗಳನ್ನು ಕಚ್ಚಾಮಾಲಾಗಿ ಅಧಿಕೃತ ಡೀಲರ್‌ಗಳಿಂದ ಮಾತ್ರ ಖರೀದಿಸತಕ್ಕದ್ದು.</u>
- ಫಲಾನುಭವಿಯು ಮಗ್ಗಗಳನ್ನು ಸ್ಥಾಪಿಸಿರುವುದನ್ನು ಕ್ಷೇತ್ರ ಮಟ್ಟದಲ್ಲಿ ಸ್ಥಳ ಪರಿಶೀಲನೆ ನಡೆಸಿ ಉತ್ಪಾದನೆಗೆ ಬೇಕಾದ ನೂಲನ್ನು ಪಡೆಯಲು ದುಡಿಮೆ ಬಂಡವಾಳ ಮೊತ್ತವನ್ನು ಎರಡು ಕಂತುಗಳಲ್ಲಿ ಮೊದಲನೆ ಕಂತು ಶೇ.50 ಮತ್ತು ಎರಡನೇ ಕಂತು ಶೇ.50ರ ಅನುಪಾತದಲ್ಲಿ ಕಚ್ಚಾ ಮಾಲು ಸರಬರಾಜು ಏಜೆನ್ಸಿ ಹೆಸರಿನಲ್ಲಿ ಚೆಕ್ ಮೂಲಕ ಹಣ ಪಾವತಿಸುವುದು. ಮೊದಲನೆ ಕಂತಿನ ಹಣಬಳಕೆ ಸದುಪಯೋಗವಾಗಿರುವುದನ್ನು ಜಿಲ್ಲಾಮಟ್ಟದ ಅಧಿಕಾರಿ ದೃಢಪಡಿಸಿಕೊಂಡು, ಹಣ ಉಪಯುಕ್ತತಾ ಪತ್ರವನ್ನು ಪಡೆದ ನಂತರವಷ್ಟೇ 2ನೇ ಕಂತಿನ ಬಿಡುಗಡೆ ಮಾಡತಕ್ಕದ್ದು.
- ಕಚ್ಚಾ ಮಾಲು ಸರಬರಾಜು ಆಗಿರುವುದನ್ನು ಪ್ರತಿ ತಿಂಗಳು ಉತ್ಪಾದನೆಗೆ ಬಳಸಿರುವ ಬಗ್ಗೆ ಸ್ಟಾಕ್ ರಿಜಿಸ್ಟರ್‌ನಲ್ಲಿ ದಾಖಲಿಸುವುದು. ಉತ್ಪನ್ನಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಪುನಃ ರಿವಾಲ್ವಿಂಗ್ ಫಂಡಾಗಿ ಬಳಸತಕ್ಕದ್ದು.

-6

ಇತರೆ :

1) ದುಡಿಮೆ ಬಂಡವಾಳ ಮೊತ್ತವನ್ನು ನೇಕಾರಿಕೆ ವೃತ್ತಿ ಮತ್ತು ಉತ್ಪಾದನಾ ಚಟುವಟಿಕೆಗಳಿಗೆ ಮಾತ್ರ ವಿನಿಯೋಗಿಸತಕ್ಕದ್ದು.
2) ಸರ್ಕಾರದಿಂದ ಬಿಡುಗಡೆಯಾದ ಮೊತ್ತದ ಮೇಲೆ ದುಡಿಮೆ ಬಂಡವಾಳ ವಹಿವಾಟಿಗೆ ಬೇಕಾದ ಮೊತ್ತವನ್ನು ಹಣಕಾಸು ಸಂಸ್ಥೆಗಳಿಂದ ಸಾಲದ ಸಾಮರ್ಥ್ಯವನ್ನು ಪಡೆಯಲು ಕ್ರಮ ವಹಿಸುವುದು.
3) ಕಚ್ಚಾ ಮಾಲನ್ನು ಅಧಿಕೃತ ಡೀಲರ್ ವತಿಯಿಂದ ಮಾತ್ರ ಖರೀದಿಸತಕ್ಕದ್ದು.
4) ಮಗ್ಗ ಸ್ಥಾಪಿಸಿದ ನಂತರ ಉತ್ಪಾದನಾ ಚಟುವಟಿಕೆಗೆ ಅಗತ್ಯಾನುಸಾರ ಮಾತ್ರ ದುಡಿಮೆ ಬಂಡವಾಳ ನೀಡತಕ್ಕದ್ದು.

6. ಕಾರ್ಯಾಗಾರ / ಮಗ್ಗದ ಕೋಣೆ ನಿರ್ಮಾಣ

**ಉದ್ದೇಶ:** ನೇಕಾರಿಕೆ ಚಟುವಟಿಕೆಗಳಲ್ಲಿ ನಿರತವಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಅವರು ವಾಸಿಸುತ್ತಿರುವ ಮನೆಗೆ ಹೊಂದಿಕೊಂಡಂತೆ ಮಗ್ಗದ ಕೋಣೆಯನ್ನು ನಿರ್ಮಿಸಿಕೊಳ್ಳಲು ಮತ್ತು ಮಗ್ಗವನ್ನು ಅಳವಡಿಸಿ ನಿರಂತರ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸತಕ್ಕದ್ದು. ಇದರಿಂದ ಅವರ ವೃತ್ತಿ ಜೀವನವನ್ನು ವೃದ್ಧಿಗೊಳಿಸಲು ಅನುಕೂಲವಾಗುವುದು.

ಅ) ಸರ್ಕಾರದ ಗರಿಷ್ಠ ಸಹಾಯಧನ – ರೂ.45,000/-
ಆ) ಫಲಾನುಭವಿಯ ವಂತಿಕೆ – ರೂ.5000/-
ಇ) ಪ್ರತಿ ಕಾರ್ಯಾಗಾರದ ಒಟ್ಟು ಮೊತ್ತ – ರೂ.50,000/-
ಈ) ಘಟಕ ವೆಚ್ಚದಲ್ಲಿ ಹೆಚ್ಚುವರಿಯಾದ ಅಂದಾಜು ಮೊತ್ತವನ್ನು ಫಲಾನುಭವಿಯು ಭರಿಸುವುದು.

ಅರ್ಹತೆಗಳು:

1) ಫಲಾನುಭವಿಯು ವಸತಿ ಹೊಂದಿದ್ದು ಸ್ವಂತ ಖಾಲಿ ನಿವೇಶನವನ್ನು ಹೊಂದಿರಬೇಕು.
2) ಸರ್ಕಾರದ ಇತರೆ ಯಾವುದೇ ಯೋಜನೆಗಳಲ್ಲಿ ಈ ಸೌಲಭ್ಯ ಪಡೆದಿರಬಾರದು.
3) ನೇಕಾರಿಕೆ ಚಟುವಟಿಕೆಗಳಲ್ಲಿ / ವೃತ್ತಿಯಲ್ಲಿ ತೊಡಗಿರಬೇಕು.
4) ಕೈಮಗ್ಗ, ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಚಟುವಟಿಕೆಗಳಲ್ಲಿ ನಿರತರಾದ ನೇಕಾರರು ಅರ್ಹರು.
5) ಅಸಂಘಟಿತ ವಲಯ, ವೈಯಕ್ತಿಕ ನೇಕಾರರು ಮತ್ತು ಸಂಘಟಿತ ವಲಯದಲ್ಲಿ ಬರುವ ಫಲಾನುಭವಿಗಳು.

ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :

- ಫಲಾನುಭವಿಯು ಮುಂಗಡವಾಗಿ ಕಟ್ಟಡ ನಿರ್ಮಾಣದ ತಳಪಾಯದ ಕೆಲಸಕ್ಕಾಗಿ ವೆಚ್ಚವನ್ನು ಭರಿಸತಕ್ಕದ್ದು.
- ಸಹಾಯಧನದ ಪಾಲು ಮೊತ್ತವನ್ನು ಪ್ರಗತಿಯನ್ನು ಆಧರಿಸಿ ***ಮೊದಲನೇ ಕಂತು ಶೇ.30, ಎರಡನೇ ಕಂತು ಶೇ.40 ಮತ್ತು ಅಂತಿಮ ಕಂತು ಶೇ.30 ರಷ್ಟು*** ಮೊತ್ತವನ್ನು ನೇರವಾಗಿ ಫಲಾನುಭವಿಯ ಹೆಸರಿನಲ್ಲಿ ಚೆಕ್ ಮೂಲಕ ಪಾವತಿಸತಕ್ಕದ್ದು.

ಇತರೆ ನಿಯಮಗಳು:

1) ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಫಲಾನುಭವಿಯು ಭರಿಸತಕ್ಕದ್ದು.
2) ಕಟ್ಟಡದ ಫೋಟೋ ದಾಖಲೀಕರಣವನ್ನು ನಿರ್ಮಾಣದ ನಂತರ ನೀಡತಕ್ಕದ್ದು.
3) ಕಟ್ಟಡದ ಕಾಮಗಾರಿ ಪೂರ್ಣಗೊಂಡ ದೃಢೀಕೃತ ಪತ್ರವನ್ನು ಅಧಿಕೃತ ರಿಜಿಸ್ಟರ್ಡ್ ಇಂಜಿನಿಯರ್‌ರವರಿಂದ ದೃಢೀಕರಿಸಬೇಕು. ಕನಿಷ್ಠ 150 ಚ.ಅಡಿ ವಿಸ್ತೀರ್ಣ ಹೊಂದಿರಬೇಕು.
4) ಕಟ್ಟಡದ ಕಾಮಗಾರಿಯ ಪ್ರಗತಿಯನ್ನು ಆಧರಿಸಿ 3 ಕಂತುಗಳಲ್ಲಿ ಹಣ ಬಿಡುಗಡೆ ಮಾಡತಕ್ಕದ್ದು
5) ಫಲಾನುಭವಿಯು ಈ ಅನುದಾನದಲ್ಲಿ ನಿರ್ಮಿಸಿದ ಆಸ್ತಿಯನ್ನು ಪರಬಾರೆ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ. ಈ ಸಂಬಂಧ ಮುಚ್ಚಳಿಕೆ ಪಡೆಯತಕ್ಕದ್ದು.
6) ನಿರ್ಮಿತ ಕಟ್ಟಡದಲ್ಲಿ ಮಗ್ಗ ಸ್ಥಾಪಿಸಿ ಉತ್ಪಾದನೆಯಲ್ಲಿ ತೊಡಗಿ ಸ್ವಯಂ ಉದ್ಯೋಗಿ ಆಗಬೇಕು.
7) ಕಟ್ಟಡದ ಮೇಲೆ "ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಯಡಿ ನಿರ್ಮಿಸಲಾದ ಕಟ್ಟಡ" ಎಂದು ನಾಮಫಲಕ ಬರೆಸತಕ್ಕದ್ದು.

ಪ್ರಸ್ತಾವನೆಯ ದಾಖಲಾತಿಗಳು:

1) ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ
2) ಫಲಾನುಭವಿ ಭಾವಚಿತ್ರ.
3) ಜಾತಿ ಪ್ರಮಾಣ ಪತ್ರದ ದೃಢೀಕರಣ ಪ್ರತಿ.
4) ಖಾಲಿ ನಿವೇಶನದ ದಾಖಲಾತಿ.
5) ಅಂದಾಜು ವೆಚ್ಚದ ಪಟ್ಟಿ.
6) ಉದ್ದೇಶಿತ ಕಟ್ಟಡದ ನಕ್ಷೆ.
7) ನೇಕಾರ ಗುರುತಿನ ಚೀಟಿ.

7. ಹೊಸ ಸದಸ್ಯರಿಗೆ ಷೇರು ಮೊತ್ತ

ಉದ್ದೇಶ: ವೈಯಕ್ತಿಕ ಹಾಗೂ ಅಸಂಘಟಿತ ವಲಯದ ನೇಕಾರರು ಸಂಘಟಿತರಾಗಲು ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಲ್ಲಿ, ಹೊಸದಾಗಿ ಸದಸ್ಯತ್ವ ಪಡೆಯಲು ಪ್ರತಿ ಸದಸ್ಯರಿಗೆ ನೊಂದಣಿ ಮೊತ್ತವಾಗಿ ಗರಿಷ್ಟ ರೂ.500/-ಗಳಂತೆ ಸರ್ಕಾರದ ವತಿಯಿಂದ ಸದಸ್ಯತ್ವ ಮೊತ್ತಕ್ಕಾಗಿ ಸಹಾಯಧನದ ರೂಪದಲ್ಲಿ ನೀಡಲಾಗತಕ್ಕದ್ದು.

ಅರ್ಹತೆಗಳು:

1) ಫಲಾನುಭವಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರಬೇಕು.
2) ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮ 1959ರ ಅನ್ವಯ ನೊಂದಾಯಿತ ಕೈಮಗ್ಗ ಅಥವಾ ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘಗಳಲ್ಲಿ ಸದಸ್ಯರಾಗ ಬಯಸುವ ಹೊಸ ಸದಸ್ಯರಿಗೆ ಈ ಸೌಲಭ್ಯವನ್ನು ನೀಡುವುದು.

ಪ್ರಸ್ತಾವನೆಯ ದಾಖಲಾತಿಗಳು:

1) ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ
2) ಜಾತಿ ಪ್ರಮಾಣ ಪತ್ರದ ದೃಢೀಕರಣ ಪ್ರತಿ.
3) ಯಾವ ಸಹಕಾರ ಸಂಘ / ಸಂಸ್ಥೆಯಲ್ಲಿ ಸದಸ್ಯರಾಗಿ ನೊಂದಾಯಿಸಲು ಉದ್ದೇಶಿತ ಸಂಸ್ಥೆ ಹೆಸರು ಮತ್ತು ವಿಳಾಸ.

ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :

- ದಿನಾಂಕ 7-7-2011 ರಂದು ಹೊರಡಿಸಿರುವ ಮಾರ್ಗಸೂಚಿಯ ಪುಟ ಸಂಖ್ಯೆ 6ರ ಕ್ರಮ ಸಂಖ್ಯೆ 6ರಲ್ಲಿ ಹೊಸ ಸದಸ್ಯರಿಗೆ ಶೇರು ಮೊತ್ತ ಗರಿಷ್ಠ ರೂ.50 ಎಂದು ನಮೂದಿಸಿದ್ದು, ಇದನ್ನು ಪ್ರತಿ ಸದಸ್ಯರಿಗೆ ನೊಂದಣಿ ಮೊತ್ತ ಗರಿಷ್ಠ ರೂ.500 ಎಂದು ತಿದ್ದುಪಡಿ ಮಾಡಿದೆ.
- ನೊಂದಾಯಿತ ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಬಯಸುವ ಅಸಂಘಟಿತ ವಲಯದ ಫಲಾನುಭವಿಗೆ ರೂ.500 ಗಳನ್ನು ಶೇರು ಮೊತ್ತವಾಗಿ ಯಾವ ಸಹಕಾರ ಸಂಘದಲ್ಲಿ ಸದಸ್ಯರಾಗಲು ಅರ್ಜಿ ಸಲ್ಲಿಸಿರುತ್ತಾರೋ ಆ ಸಂಘದ ಹೆಸರಿನಲ್ಲಿ ಚೆಕ್ / ಡಿ.ಡಿ. ಮೂಲಕ ಒಂದೇ ಕಂತಿನಲ್ಲಿ ಹಣ ಬಿಡುಗಡೆ ಮಾಡಲಾಗುವುದು.

ಸದಸ್ಯತ್ವ ಹೊಂದಿದ ನೇಕಾರರ ಹೆಸರಿನಲ್ಲಿ ಮುದ್ರಿತ ಶೇರು ಸರ್ಟಿಫಿಕೇಟನ್ನು ಸಂಘವು ನೀಡತಕ್ಕದ್ದು

8. ಮಗ್ಗ ಪೂರ್ವ ಸೌಲಭ್ಯಗಳು

ಉದ್ದೇಶ: ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರ ಸಾಂದ್ರತೆ ಇರುವ ಸಂಘಟಿತ ವಲಯ ಹಾಗೂ ಅಸಂಘಟಿತ ವಲಯಗಳಲ್ಲಿ ಸಾಮೂಹಿಕ ಸೌಲಭ್ಯ ಕೇಂದ್ರಗಳಲ್ಲಿ ಉತ್ಪಾದನೆಗೆ ಮಗ್ಗಪೂರ್ವ ಚಟುವಟಿಕೆಗಳಾದ ವೈಂಡಿಂಗ್, ವಾರ್ಪಿಂಗ್, ಟ್ವಿಸ್ಟಿಂಗ್, ಬಣ್ಣ ಹಾಕುವುದು ಮತ್ತು ನೇಯ್ಗೆಪೂರ್ವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಮಗ್ಗಪೂರ್ವ ಸೌಲಭ್ಯಗಳನ್ನು ಒದಗಿಸಲಾಗುವುದು. ಇದಕ್ಕೆ ಬೇಕಾದ ಪೂರಕ ಯಂತ್ರೋಪಕರಣಗಳನ್ನು ಖರೀದಿಸಿ ನೇಕಾರರಿಗೆ ಸಾಮೂಹಿಕ ಬಳಕೆಗಾಗಿ ಒದಗಿಸುವುದು. ಪ್ರತಿ ಘಟಕ ವೆಚ್ಚ ಗರಿಷ್ಠ ರೂ.6.00 ಲಕ್ಷಗಳನ್ನು ಸಹಾಯಧನವಾಗಿ ಸಂಸ್ಥೆಗಳ ಮೂಲಕ ಮಾತ್ರ ನೀಡಲಾಗುವುದು.

1. ಯೋಜನಾ ಮೊತ್ತ ರೂ.6,00,000/-
2. ಸರ್ಕಾರದ ಗರಿಷ್ಠ ಸಹಾಯಧನ ರೂ.6,00,000/-
3. ಅಂದಾಜು ವೆಚ್ಚದ ಹೆಚ್ಚುವರಿ ಮೊತ್ತವನ್ನು ಸಂಸ್ಥೆಗಳು ಭರಿಸುವುದು.

ಅರ್ಹತೆಗಳು :

1) ಕರ್ನಾಟಕ ರಾಜ್ಯದಲ್ಲಿ ನಿಯಮಾನುಸಾರ ನೋಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೈಮಗ್ಗ ನೇಕಾರರ ಸಹಕಾರ ಸಂಘ, ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘ, ವಿವಿದ್ದೋದ್ದೇಶಗಳ ಸಹಕಾರ ಸಂಘ, ಸ್ವಯಂ ಸೇವಾ ಸಹಕಾರ ಸಂಘ, ಮಹಿಳಾ ಸೇವಾ ಸಹಕಾರ ಸಂಘ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು.
2) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೈಮಗ್ಗ ಅಥವಾ ವಿದ್ಯುತ್ ಮಗ್ಗ ನೇಕಾರರ ಅಥವಾ ವಿವಿದ್ದೋದ್ದೇಶಗಳ ಸಹಕಾರ ಸಂಘಗಳು.
3) ಸಂಸ್ಥೆ ಹೆಸರಿನಲ್ಲಿ ಸ್ವಂತ ಕಟ್ಟಡ ಹೊಂದಿರತಕ್ಕದ್ದು.

--9

<u>ಪ್ರಸ್ತಾವನೆಯ ದಾಖಲಾತಿಗಳು:</u>

1) ನಮೂನೆ 1-29 ರಲ್ಲಿ ಸಂಘದ ಸಾಮಾನ್ಯ ಮಾಹಿತಿಗಳು
2) ಫಲಾನುಭವಿಗಳ ಪಟ್ಟಿ (ವಿಳಾಸ ಸೇರಿದಂತೆ)
3) ಸಂಘದ ಆಡಳಿತ ಮಂಡಳಿ ಠರಾವು ಪ್ರತಿ
4) ಆಡಳಿತ ಮಂಡಳಿ ಸದಸ್ಯರ ಪಟ್ಟಿ
5) ಯಂತ್ರೋಪಕರಣ ಖರೀದಿ ದರ ಪಟ್ಟಿ
6) ಸಂಸ್ಥೆಯ ಕಾರ್ಯನಿರ್ವಹಣಾ ಯೋಜನಾ ವರದಿ
7) ಸಂಸ್ಥೆ ನೊಂದಣಿ ಪ್ರಮಾಣ ಪತ್ರ.
8) ಕಟ್ಟಡದ ದಾಖಲಾತಿಯ ಪ್ರತಿ ಪಡೆಯತಕ್ಕದ್ದು.
9) ಯೋಜನೆಯ ಅನುದಾನದಿಂದ ಸೃಜಿಸಲಾದ ಆಸ್ತಿ/ಯಂತ್ರೋಪಕರಣಗಳನ್ನು ಮಂಜೂರಾತಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೆ ಪರಬಾರೆ/ಮಾರಾಟ ಮಾಡಬಾರದು. ಈ ಬಗ್ಗೆ ಕರಾರು ಒಪ್ಪಂದ ಪತ್ರವನ್ನು ಸಂಸ್ಥೆಯಿಂದ ಪಡೆಯತಕ್ಕದ್ದು.

<u>ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :</u>

- ಮಗ್ಗ ಪೂರ್ವ ಸೌಲಭ್ಯಗಳನ್ನು ಖರೀದಿಸುವಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮವನ್ನು ಪಾಲಿಸತಕ್ಕದ್ದು.
- ಯಂತ್ರೋಪಕರಣಗಳ ಬೇಡಿಕೆ / ಅಗತ್ಯತೆಯನ್ನು ಆಧರಿಸಿ ವಿಶೇಷ ಪ್ರಕರಣಗಳಲ್ಲಿ ಅಧಿಕೃತ ಡೀಲರ್‌ಗಳಿಂದ ಮಾತ್ರ ಖರೀದಿಸುವಾಗ ಶೇ.25 ರಷ್ಟು ಮುಂಗಡ ಪಾವತಿಸುವುದು.
- ಯಂತ್ರೋಪಕರಣಗಳು ಸಹಕಾರ ಸಂಘ – ಸಂಸ್ಥೆಗಳಿಗೆ ಭೌತಿಕವಾಗಿ ಸರಬರಾಜು ಮಾಡಿ ಸ್ಥಾಪಿಸಿ ಕಾರ್ಯಚರಣೆಗೆ ತಂದ ನಂತರ ಪರಿವೀಕ್ಷಣೆ ನಡೆಸಿ ಉತ್ತಮ ಗುಣಮಟ್ಟವೆಂದು ಖಾತ್ರಿ ಪಡಿಸಿಕೊಂಡು ಅಂತಿಮ ಬಡವಾಡೆಯಾಗಿ ಶೇ.75 ರಷ್ಟು ಮೊತ್ತವನ್ನು ಯಂತ್ರೋಪಕರಣಗಳ ಸರಬರಾಜುದಾರರಿಗೆ ಚೆಕ್ ಮೂಲಕ ಪಾವತಿಸುವುದು.
- ಯಂತ್ರೋಪಕರಣಗಳನ್ನು SC/ST ಫಲಾನುಭವಿಗಳ ಬಳಕೆಗೆ ಮಾತ್ರ ಉಪಯೋಗಿಸತಕ್ಕದ್ದು.

<u>9. ಸಾಮಾನ್ಯ ಸೌಲಭ್ಯ ಕೇಂದ್ರ</u>

**ಉದ್ದೇಶ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರು/ಫಲಾನುಭವಿಗಳು ಸಾಂದ್ರತೆ ಇರುವ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮುಖಾಂತರ ಒಂದೇ ಸ್ಥಳದಲ್ಲಿ ನೇಕಾರಿಕೆ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ನೆರವಾಗುವಂತೆ ಸಾಮೂಹಿಕ ಸೌಲಭ್ಯ ಕೇಂದ್ರಗಳನ್ನು ನಿರ್ಮಿಸಿಕೊಡಲಾಗುವುದು. ಇದರಿಂದ ಒಂದೇ ಸ್ಥಳದಲ್ಲಿ ಮೂಲಭೂತ ಯಂತ್ರೋಪಕರಣಗಳ ನೇಯ್ಗೆ ಕೇಂದ್ರ, ಮಗ್ಗಪೂರ್ವ ಚಟುವಟಿಕೆಗಳು, ವಿದ್ಯುತ್ ಮಗ್ಗಗಳು, ಕೈಮಗ್ಗಗಳು ಮತ್ತು ಸುಧಾರಿತ ಉಪಕರಣಗಳನ್ನು ಅಳವಡಿಸಿ ನೇಕಾರರು ನಿರಂತರ ಉತ್ಪಾದನೆಯಲ್ಲಿ ತೊಡಗಿಸಿಕೊಂಡು ಅವರ ಜೀವನಮಟ್ಟವನ್ನು ಸುಧಾರಿಸಲು ನೆರವು ನೀಡುವುದು.

ಅ. ಸಾಮಾನ್ಯ ಸೌಲಭ್ಯ ಕೇಂದ್ರ ಕಟ್ಟಡ ನಿರ್ಮಾಣ.

ಯೋಜನಾ ಮೊತ್ತದ ವಿವರ:

(1) ಸರ್ಕಾರದ ಸಹಾಯಧನ ರೂ.15.00ಲಕ್ಷ

(2) ಘಟಕ ವೆಚ್ಚದ ಹೆಚ್ಚುವರಿ ಮೊತ್ತವನ್ನು ಸಂಸ್ಥೆ ಭರಿಸಬೇಕು.

(3) ಸಂಸ್ಥೆಯ ಹೆಸರಿನಲ್ಲಿ ಸ್ವಂತ ನಿವೇಶನ ಹೊಂದಿರಬೇಕು.

(4) ಕನಿಷ್ಟ 1500 ಚದುರಡಿ ವಿಸ್ತೀರ್ಣವುಳ್ಳ ಕಟ್ಟಡವನ್ನು ನಿರ್ಮಿಸಬೇಕು.

(5) ಪ್ರತಿ ಸಾಮೂಹಿಕ ಸೌಲಭ್ಯ ಕೇಂದ್ರದ ಒಟ್ಟು ಮೊತ್ತ ರೂ.15.00 ಲಕ್ಷ

ಅರ್ಹತೆಗಳು:

ಕರ್ನಾಟಕ ರಾಜ್ಯದಲ್ಲಿ ನಿಯಮಾನುಸಾರ ನೋಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳು ಯೋಜನೆಯ ಸೌಲಭ್ಯ ಪಡೆಯಲು ಅರ್ಹವಾಗಿವೆ.

ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :

- ಉದ್ದೇಶಿತ ಕಟ್ಟಡ ನಿರ್ಮಿಸುವಲ್ಲಿ ಕಾಮಗಾರಿಯ ಪ್ರಗತಿಯನ್ನು ಆಧರಿಸಿ 4 ಕಂತುಗಳಲ್ಲಿ ಪ್ರತಿ ಕಂತು ರೂ.3.75 ಲಕ್ಷದಂತೆ ಮೊದಲನೆ ಕಂತು ಶೇ.25, ಎರಡನೇ ಕಂತು ಶೇ.25, ಮೂರನೇ ಕಂತು ಶೇ.25 ಮತ್ತು ನಾಲ್ಕನೇ ಕಂತು ಶೇ.25 ರಷ್ಟು ಹಣವನ್ನು ಸಿವಿಲ್ ಕಂಟ್ರಾಕ್ಟರ್ ಹೆಸರಿನಲ್ಲಿ ಅಥವಾ ಸಹಕಾರ ಸಂಘ – ಸಂಸ್ಥೆಗಳ ಹೆಸರಿನಲ್ಲಿ ಬಿಡುಗಡೆ ಮಾಡುವುದು.
- ಕಟ್ಟಡ ಕಾಮಗಾರಿಕೆಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮವನ್ನು ಪಾಲಿಸುವುದು.

ಇತರೆ ನಿಯಮಗಳು :

1) ಕಟ್ಟಡದ ಮೇಲೆ " ------- ಸಾಲಿನಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆಯಡಿ ನಿರ್ಮಿಸಲಾದ ಕಟ್ಟಡ" ಎಂದು ನಾಮಫಲಕ ಬರೆಸತಕ್ಕದ್ದು.
2) ಇಲಾಖೆಯ ಅನುಮತಿ ಇಲ್ಲದೆ ಈ ಯೋಜನೆಯಡಿ ನಿರ್ಮಿಸಿದ ಆಸ್ತಿಯನ್ನು ಪರಬಾರೆ ಅಥವಾ ವರ್ಗಾವಣೆ ಮಾಡತಕ್ಕದ್ದಲ್ಲ.
3) ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಅಂದಾಜು ಮೊತ್ತವನ್ನು ಭರಿಸಲು ಸಂಸ್ಥೆಯಿಂದ ಆಡಳಿತ ಮಂಡಳಿ ಠರಾವಿನೊಂದಿಗೆ ಖಾತ್ರಿ ನೀಡತಕ್ಕದ್ದು.
4) ಉದ್ದೇಶಿತ ಕಟ್ಟಡವನ್ನು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ನೇಕಾರರ ನೇಯ್ಗೆ ಚಟುವಟಿಕೆಗಳಿಗೆ ಮಾತ್ರ ಉಪಯೋಗಿಸುವುದು.
5) ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಅಧಿಕೃತ ರಿಜಿಸ್ಟರ್ಡ್ ಇಂಜಿನಿಯರ್‌ರವರಿಂದ ಕಂಪ್ಲೀಷನ್ ಸರ್ಟಿಫಿಕೇಟ್ ದೃಢೀಕರಿಸುವುದು.
6) ಕಟ್ಟಡ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡುವುದು ಹಾಗೂ ದಾಖಲೆಯಾಗಿ ಫೋಟೋ ಪ್ರತಿ ಪಡೆದು ಇಡತಕ್ಕದ್ದು.
7) ಸಹಕಾರ ಸಂಘದಿಂದ ಇಂಡೆಂಚರ್ ಬಾಂಡ್ ಪಡೆಯತಕ್ಕದ್ದು.

<u>ಪ್ರಸ್ತಾವನೆಯ ದಾಖಲಾತಿಗಳು :</u>

1. ನಮೂನೆ – 1 ರಿಂದ 29 ರಲ್ಲಿ ಸಂಘದ / ಸಂಸ್ಥೆಯ ಮಾಹಿತಿ.
2. ಖಾಲಿ ನಿವೇಶನದ ದಾಖಲಾತಿಗಳು
3. ಕಟ್ಟಡದ ಅಂದಾಜು ಪಟ್ಟಿ
4. ಕಟ್ಟಡದ ನಕ್ಷೆ
5. ಆಡಳಿತ ಮಂಡಳಿ ಠರಾವು ಪ್ರತಿ
6. ಆಡಳಿತ ಮಂಡಳಿ ನಿರ್ದೇಶಕರ ವಿಳಾಸದ ಪಟ್ಟಿ
7. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಸಂಸ್ಥೆಯು ಭರಿಸುವ ಮುಚ್ಚಳಿಕೆ ಪತ್ರ
8. ಸಹಕಾರ ಸಂಘದ ಬೈಲಾ ಪಟ್ಟಿ / ಉಪ ನಿಯಮಗಳ ಪ್ರತಿ.
9. ಸಂಘ / ಸಂಸ್ಥೆಯ ನೋಂದಣಿ ಪ್ರಮಾಣ ಪತ್ರದ ಪ್ರತಿ.
10. ಸಹಕಾರ ಸಂಘ / ಸಂಸ್ಥೆಯಲ್ಲಿ ನೋಂದಾಯಿತ ಖಅ/ಖಖಿಫಲಾನುಭವಿ ಸದಸ್ಯರ ಪಟ್ಟಿ.

<u>10. ಪ್ರಾಥಮಿಕ ನೇಕಾರರ ಸಹಕಾರ ಸಂಘಗಳಿಗೆ ಷೇರು ಬಂಡವಾಳ ಮೊತ್ತ :</u>

ಉದ್ದೇಶ : ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರ ಸಹಕಾರ ಸಂಘಗಳು ಸಂಸ್ಥೆಯ ವಹಿವಾಟನ್ನು ಅಭಿವೃದ್ಧಿ ಪಡಿಸಲು, ಉತ್ಪಾದನಾ ಚಟುವಟಿಕೆಗಳಿಗೆ ಬೇಕಾದ ಬಂಡವಾಳವನ್ನು ತೊಡಗಿಸಲು ಹಣ ಕಾಸು ಸಂಸ್ಥೆಗಳಿಂದ ಸಾಲ ಎತ್ತುವ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಮಾತ್ರ ಸರ್ಕಾರದ ಶೇರು ಬಂಡವಾಳ ಮೊತ್ತವಾಗಿ ಪ್ರತಿ ಸಂಸ್ಥೆಗೆ ಗರಿಷ್ಠ ರೂ.1.00 ಲಕ್ಷಗಳವರೆಗೆ ಅಥವಾ ಸಂಸ್ಥೆಯು ತನ್ನ ಸದಸ್ಯರಿಂದ ಸಂಗ್ರಹಿಸಿರುವ ಶೇರು ಬಂಡವಾಳ ಮೊತ್ತಕ್ಕೆ ಸಮನಾಗಿ ಯಾವುದು ಕಡಿಮೆಯೋ ಅದನ್ನು ಸರ್ಕಾರದ ಶೇರು ಬಂಡವಾಳ ಮೊತ್ತವನ್ನು ತೊಡಗಿಸುವುದು.

<u>ಅರ್ಹತೆಗಳು :</u>

1) ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮ 1959ರ ಅನ್ವಯ ನೊಂದಾಯಿತ ಕೈಮಗ್ಗ ಅಥವಾ ವಿದ್ಯುತ್ ಮಗ್ಗ ನೇಕಾರರ ಅಥವಾ ವಿವಿದ್ದೋದ್ದೇಶಗಳ ಸಹಕಾರ ಸಂಘಗಳು.
2) ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೈಮಗ್ಗ ಅಥವಾ ವಿದ್ಯುತ್ ಮಗ್ಗ ನೇಕಾರರ ಅಥವಾ ವಿವಿದ್ದೋದ್ದೇಶಗಳ ಸಹಕಾರ ಸಂಘಗಳು.
3) ಸಂಘವು SC/ST ನೇಕಾರ ಫಲಾನುಭವಿಗಳು ಉತ್ಪಾದನಾ ಚಟುವಟಿಕೆಗಳಲ್ಲಿ ಕಾರ್ಯನಿರತವಾಗಿರಬೇಕು.

<u>ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :</u>

- ಸಂಸ್ಥೆಯ ಉತ್ಪಾದನಾ ಚಟುವಟಿಕೆಗಳಿಗೆ ಮೊದಲನೇ ಕಂತು ಶೇ.50 ಮತ್ತು ಎರಡನೇ ಕಂತು ಶೇ.50 ರಷ್ಟು ಶೇರು ಮೊತ್ತವನ್ನು ಎರಡು ಕಂತುಗಳಲ್ಲಿ ಸಹಕಾರ ಸಂಘದ ಹೆಸರಿನಲ್ಲಿ ಚೆಕ್ ಮೂಲಕ ಬಿಡುಗಡೆ ಮಾಡುವುದು.

ಇತರೆ ನಿಯಮಗಳು

1) ಸರ್ಕಾರದ ಶೇರು ಬಂಡವಾಳ ಮೊತ್ತಕ್ಕೆ ರಾಜ್ಯಪಾಲರು, ಕರ್ನಾಟಕ ಸರ್ಕಾರದ ಹೆಸರಿನಲ್ಲಿ ಮುದ್ರಿತ ಶೇರು ಸರ್ಟಿಫಿಕೇಟನ್ನು ನೀಡತಕ್ಕದ್ದು.
2) ಸಂಘವು ಗಳಿಸಿದ ಲಾಭದಲ್ಲಿ ವಾರ್ಷಿಕ ತನ್ನ ಸದಸ್ಯರಿಗೆ ಘೋಷಿಸುವ ಡಿವಿಡೆಂಟ್ ಮೊತ್ತದಂತೆ ಸರ್ಕಾರದ ಶೇರು ಬಂಡವಾಳಕ್ಕೂ ಡಿವಿಡೆಂಟ್ ನೀಡತಕ್ಕದ್ದು.
3) ಸಂಸ್ಥೆಯ ವಹಿವಾಟಿನ ತ್ರೈಮಾಸಿಕ ವರದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

ಪ್ರಸ್ತಾವನೆಯ ದಾಖಲಾತಿಗಳು:

1) ನಮೂನೆ 1-29 ರಲ್ಲಿ ಸಂಘದ ಸಾಮಾನ್ಯ ಮಾಹಿತಿಗಳು
2) ಸಂಘದ ನೊಂದಣಿ ಪತ್ರದ ಪ್ರತಿ
3) ಬೈಲಾಪ್ರತಿ/ಉಪನಿಯಮದ ಪ್ರತಿ.
4) ಆಡಳಿತ ಮಂಡಳಿ ಠರಾವು
5) ಆಡಳಿತ ಮಂಡಳಿ ಸದಸ್ಯರ ಪಟ್ಟಿ ಹಾಗೂ ಸದಸ್ಯರ ಪಟ್ಟಿ
6) ಸಂಘದ ಕಾರ್ಯ ಚಟುವಟಿಕೆಗಳ ಸಂಕ್ಷಿಪ್ತ ವರದಿ
7) ಆಡಿಟ್ ವರದಿಗಳು.
8) ಸಂಘಕ್ಕೆ ಹಣಕಾಸು ಸಂಸ್ಥೆಯು ದುಡಿಮೆ ಬಂಡವಾಳ ಸಾಲ ಮಂಜೂರು ಮಾಡುವುದಾಗಿ ಖಾತರಿ ಪತ್ರ.

## 11. ಮಾರುಕಟ್ಟೆ ಪ್ರೋತ್ಸಾಹನ ಯೋಜನೆ :

**ಉದ್ದೇಶ :** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಾಥಮಿಕ ನೇಕಾರರ ಸಹಕಾರ ಸಂಘಗಳು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ನೆರವಾಗುವಂತೆ, ಜಿಲ್ಲಾ ಮಟ್ಟದ ಮೇಳಗಳು, ವಿಶೇಷ ಕೈಮಗ್ಗ ಮೇಳ ಮತ್ತು ರಾಷ್ಟ್ರೀಯ ಕೈಮಗ್ಗ ಮೇಳಗಳಲ್ಲಿ ಭಾಗವಹಿಸಿ ಮಾರಾಟ ಮಾಡಲು ಹಾಗೂ ಉತ್ಪನ್ನಗಳಿಗೆ ಸೂಕ್ತ ಪ್ರಚಾರ ದೊರೆಯಲು ಉತ್ತೇಜನ ನೀಡಲಾಗುವುದು. ಸಂಸ್ಥೆಯು ಹೊಂದಿರುವ ಸ್ಥಳದಲ್ಲಿ ಅಥವಾ ಮಾರುಕಟ್ಟೆಗೆ ಹತ್ತಿರವಾದ ಸ್ಥಳದಲ್ಲಿ ಮಾರಾಟ ಮಳಿಗೆಯನ್ನು ನಿರ್ಮಿಸುವುದು. ಈ ಉದ್ದೇಶಕ್ಕಾಗಿ ಸಂಚಾರಿ ಮಾರಾಟ ವಾಹನವನ್ನು ಖರೀದಿಸಲು ಅಥವಾ ಹೊಸ ಮಾರಾಟಮಳಿಗೆ ತೆರೆಯಲು ಮಾರುಕಟ್ಟೆ ಪ್ರೋತ್ಸಾಹನ ಸಹಾಯಧನವನ್ನು ನೀಡಲಾಗುವುದು.

ಯೋಜನಾ ಮೊತ್ತದ ವಿವರ :

1) ಸರ್ಕಾರದ ಗರಿಷ್ಠ ಸಹಾಯಧನ ರೂ.5,00,000/-
2) ಅಂದಾಜು ವೆಚ್ಚದ ಹೆಚ್ಚುವರಿ ಮೊತ್ತವನ್ನು ಸಂಸ್ಥೆಗಳು ಭರಿಸುವುದು.

ಅರ್ಹತೆಗಳು :

ಕರ್ನಾಟಕ ರಾಜ್ಯದಲ್ಲಿ ನಿಯಮಾನುಸಾರ ನೋಂದಾಯಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳು ಯೋಜನೆಯ ಸೌಲಭ್ಯ ಪಡೆಯಲು ಅರ್ಹವಾಗಿವೆ. ಸಂಸ್ಥೆಯ ಕನಿಷ್ಠ -25 ಮಗ್ಗಗಳು ಕಾರ್ಯನಿರತವಾಗಿರಬೇಕು.

--13

**ಪ್ರಸ್ತಾವನೆಯ ದಾಖಲಾತಿಗಳು:**

1) ನಮೂನೆ 1–29 ರಲ್ಲಿ ಸಂಸ್ಥೆಯ ಸಾಮಾನ್ಯ ಮಾಹಿತಿ.
2) ಸಂಘದ ನೊಂದಣಿ ಪ್ರಮಾಣ ಪತ್ರದ ಪ್ರತಿ.
3) ಆಡಳಿತ ಮಂಡಳಿ ಠರಾವು
4) ಆಡಳಿತ ಮಂಡಳಿ ಸದಸ್ಯರ ಪಟ್ಟಿ
5) ಸಂಕ್ಷಿಪ್ತ ಯೋಜನಾ ವರದಿ ಮತ್ತು ಉತ್ಪಾದನಾ ವಿವರ
6) ಪ್ರೊಫಾರ್ಮಾಇನ್‌ವಾಯ್ಸ್ (ವಾಹನ ಖರೀದಿಗೆ) /ಮಾರಾಟ ಮಳಿಗೆಗೆ ಸಂಬಂಧಿಸಿದಂತೆ ಜಾಗದ ದಾಖಲೆ Plan & Estimate.
7) ಹಿಂದಿನ ಮೂರು ವರ್ಷಗಳ ಆಡಿಟ್ ವರದಿ

**ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :**

- ಸಂಚಾರಿ ಮಾರುಕಟ್ಟೆ ವಾಹನವನ್ನು ಅಧಿಕೃತ ಡೀಲರ್ ಮೂಲಕ ಮಾತ್ರ ಹೊಸ ವಾಹನವನ್ನು ಖರೀದಿಸಿ ವಾಹನ ಡಿಲೆವರಿ ಪಡೆದ ನಂತರ ಏಜೆನ್ಸಿ ಹೆಸರಿನಲ್ಲಿ ಅಥವಾ ಸಂಬಂಧಿಸಿದ ಸಹಕಾರ ಸಂಘ – ಸಂಸ್ಥೆಗಳ ಹೆಸರಿನ ಮೂಲಕ ಒಂದೇ ಕಂತಿನಲ್ಲಿ ಚೆಕ್ / ಡಿ.ಡಿ. ಮೂಲಕ ಹಣ ಬಿಡುಗಡೆ ಮಾಡುವುದು. ಮಾರಾಟ ಮಳಿಗೆ/ ಮಾರಾಟ ವಾಹನವನ್ನು ಸಂಸ್ಥೆಯ ವೆಚ್ಚದಿಂದಲೇ ನಿರ್ವಹಣೆ ಮಾಡಲಾಗುವುದರ ಬಗ್ಗೆ ಕರಾರು ಒಪ್ಪಂದವನ್ನು ಸಂಸ್ಥೆಯಿಂದ ಪಡೆಯ ತಕ್ಕದ್ದು.

**ಇತರೆ ನಿಯಮಗಳು :**

1) ಸಂಸ್ಥೆಯು ನಿರ್ಮಿಸಿದ ಮಾರಾಟ ಮಳಿಗೆಯನ್ನು ಉತ್ಪನ್ನಗಳನ್ನು ಮಾರಾಟ ಮಾಡಲು ಮಾತ್ರ ಉಪಯೋಗಿಸತಕ್ಕದ್ದು.
2) ಸಂಚಾರಿ ಮಾರಾಟ ವಾಹನ ಇದ್ದಲ್ಲಿ ಇಲಾಖೆಯ ಹೆಸರಿನಲ್ಲಿ ಹೈಪೋಥಿಕೇಷನ್ ಮಾಡುವುದು.
3) ಮಾರಾಟ ಮಳಿಗೆ ಅಥವಾ ಸಂಚಾರಿ ಮಾರಾಟ ವಾಹನವನ್ನು ಸಂಸ್ಥೆಯ ಮಾರುಕಟ್ಟೆ ವಹಿವಾಟು ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.
4) ಮಂಜೂರಾತಿ ಪ್ರಾಧಿಕಾರದ ಅನುಮತಿ ಇಲ್ಲದೆ ಪರಬಾರೆ ಮಾಡತಕ್ಕದ್ದಲ್ಲ.
5) ಮಾರಾಟ ಮಳಿಗೆ ಅಥವಾ ಸಂಚಾರಿ ಮಾರಾಟ ವಾಹನದ ಮೇಲೆ ಇಲಾಖೆ ಮತ್ತು ಯೋಜನೆಯ ಹೆಸರನ್ನು ಕಡ್ಡಾಯವಾಗಿ ಬರೆಸತಕ್ಕದ್ದು.
6) ಸಂಸ್ಥೆಯ ಮಾರಾಟ ವಹಿವಾಟಿಗೆ ತಕ್ಕಂತೆ ಅಗತ್ಯಾನುಸಾರ ಮಿನಿ ಗೂಡ್ಸ್ ಟೆಂಪೊ ಮಾದರಿ ವಾಹನವನ್ನು ಖರೀದಿಸಲು ಆದ್ಯತೆ ನೀಡುವುದು.
7) ಮಾರಾಟ ಮಳಿಗೆ/ವಾಹನಕ್ಕೆ ಸಂಬಂಧಿಸಿದಂತೆ ವಿಮೆಯನ್ನು ಸಂಸ್ಥೆಯಲ್ಲಿ ಭರಿಸತಕ್ಕದ್ದು ಹಾಗೂ ಪ್ರತಿವರ್ಷ ವಿಮೆ ನವೀಕರಿಸತಕ್ಕದ್ದು.
8) ಮಾರಾಟ ವಾಹನ ಚಾಲನೆ ಮಾಡುವ ಚಾಲಕರಿಂದ ಅರ್ಹತೆ ಇರುವ ಸಾರಿಗೆ ಇಲಾಖೆ ನಿಗದಿಪಡಿಸಿರುವ ಎಲ್ಲಾ ಪ್ರಮಾಣ ಪತ್ರಗಳನ್ನು ಸಂಸ್ಥೆಯು ಪಡೆಯತಕ್ಕದ್ದು.
9) ಮಾರಾಟ ಮಳಿಗೆ ನಿರ್ಮಾಣಕ್ಕೆ ಸಂಸ್ಥೆಯ ಹೆಸರಲ್ಲಿ ಖಾಲಿ ನಿವೇಶನ ಇರತಕ್ಕದ್ದು.
10) ಕಟ್ಟಡದ ಅಂದಾಜು ವೆಚ್ಚ ಮತ್ತು ನಕ್ಷೆಯನ್ನು ಅಧಿಕೃತ ಇಂಜಿನಿಯರ್ ರವರಿಂದ ದೃಢೀಕರಿಸಿದ್ದು, ಜವಳಿ ಅಭಿವೃದ್ಧಿ ಆಯುಕ್ತರಿಂದ ಅನುಮೋದನೆ ಪಡೆಯತಕ್ಕದ್ದು.

**12. ಎಲೆಕ್ಟ್ರಾನಿಕ್ ಜಕಾರ್ಡ್**

ಹಾಲಿ ವಿದ್ಯುತ್ ಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಮಾರುಕಟ್ಟೆಯ ಬೇಡಿಕೆಗೆ ತಕ್ಕಂತೆ ವಿಶಿಷ್ಠ ವಿನ್ಯಾಸಗಳನ್ನು ಅಳವಡಿಸಲು ಪ್ರತಿಯೊಂದು ಉತ್ಪನ್ನಗಳಿಗೆ ಒಂದೊಂದು ಪ್ರತ್ಯೇಕ ವಿನ್ಯಾಸ ನೇಯಲು ಅನುಕೂಲವಾಗುವಂತೆ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಒದಗಿಸುವುದು. ಇದರಿಂದಾಗಿ ಹಳೆಯ

ಯಾಂತ್ರಿಕ ಜಕಾರ್ಡ್‌ಗಳ ಬದಲಾಗಿ ಹೊಸ ಮಾದರಿಯ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಬಳಸುವುದರಿಂದ ಹೆಚ್ಚಿನ ಉತ್ಪಾದನೆಯನ್ನು ಮಾಡಬಹುದು ಹಾಗೂ ಪ್ರತಿ ಸಾರಿ ಹೊಸ ವಿನ್ಯಾಸ ಬದಲಾವಣೆಯ ಸಮಯದಲ್ಲಿ ಸಮಯದಲ್ಲಿ ಆಗುವ ವೆಚ್ಚದ ಹಾಗೂ ಸಮಯವನ್ನು ಉಳಿತಾಯ ಮಾಡಬಹುದಾಗಿದೆ.

ಅ) ಸರ್ಕಾರದ ಗರಿಷ್ಠ ಸಹಾಯಧನ – ರೂ.4,05,000/-

ಆ) ಫಲಾನುಭವಿಯ ವಂತಿಕೆ – ರೂ.45,000/-

ಇ) ಪ್ರತಿ ಘಟಕದ ಮೊತ್ತ – ರೂ.4,50,000/-

ಈ) ಘಟಕ ವೆಚ್ಚದಲ್ಲಿ ಹೆಚ್ಚುವರಿಯಾದ ಮೊತ್ತವನ್ನು ಫಲಾನುಭವಿಯು ಭರಿಸುವುದು.

**ಫಲಾನುಭವಿಗಳು :-**

- ಫಲಾನುಭವಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
- ನೇಕಾರ ಫಲಾನುಭವಿಯು ಸ್ವಂತ ಘಟಕ ಹಾಗೂ ಸ್ವಂತ Multiple Box ವಿದ್ಯುತ್ ಮಗ್ಗ ಹೊಂದಿರಬೇಕು ಹಾಗೂ ಫಲಾನುಭವಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಹೊಂದಿರಬೇಕು. (ಈ ಬಗ್ಗೆ ದಾಖಲೆ ಒದಗಿಸಬೇಕು).
- ನೇಕಾರ ಫಲಾನುಭವಿಯು ಬಾಡಿಗೆ ಮನೆ / ಶೆಡ್‌ನಲ್ಲಿ ಸ್ವಂತ ವಿದ್ಯುತ್ ಮಗ್ಗ ಸ್ಥಾಪಿಸಿರುವವರು ಮನೆ / ಶೆಡ್ ಹಾಗೂ ವಿದ್ಯುತ್ ಸಂಪರ್ಕ ಬಾಡಿಗೆ ಆದಾರ‌ದ ಮೇಲೆ ಪಡೆದಿರುವ ಬಗ್ಗೆ ಕರಾರು ಪತ್ರ ಒದಗಿಸಬೇಕು.
- ಜಕಾರ್ಡ್ ನೇಯ್ಗೆಯಲ್ಲಿ ಪರಿಣಿತಿ/ ತರಬೇತಿ ಹೊಂದಿರತಕ್ಕದ್ದು.

**ಹಣಕಾಸಿನ ನೆರವು :-**

- ಘಟಕದ ವೆಚ್ಚ ಗರಿಷ್ಠ ಮೊತ್ತ ರೂ.4.50 ಲಕ್ಷಗಳು (ಎಲೆಕ್ಟ್ರಾನಿಕ್ ಜಕಾರ್ಡ್)
- ಸರ್ಕಾರದ ಸಹಾಯಧನ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನ ಗರಿಷ್ಠ ರೂ.4.05 ಲಕ್ಷಗಳನ್ನು ಒದಗಿಸಲು ಉದ್ದೇಶಿಸಲಾಗಿದೆ
- ಉಳಿದ ಮೊತ್ತವನ್ನು ನೇಕಾರ ಫಲಾನುಭವಿಯು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಭರಿಸಲು ಶಕ್ತರಿರಬೇಕು.

**ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು**

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಇತ್ತೀಚಿನ ಭಾವಚಿತ್ರ– ಘಟಕದ ನೊಂದಣಿ ಪ್ರಮಾಣ ಪತ್ರ, ಜಿಲಾಮಟ್ಟದ ಅಧಿಕಾರಿ ವಿತರಿಸಿದ ನೇಕಾರರ ಗುರುತಿನ ಚೀಟಿ
- ವಿದ್ಯುತ್‌ಮಗ್ಗಗಳನ್ನು ಸ್ಥಾಪಿಸಿರುವ ಸ್ವಂತ / ಬಾಡಿಗೆ ಸ್ಥಳದ ದಾಖಲಾತಿ
- ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ. ಆರ್.ಆರ್. ನಂ.
- ಬ್ಯಾಂಕ್ / ಹಣಕಾಸಿನ ಸಂಸ್ಥೆಗಳಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ ಅಥವಾ ಸರ್ಕಾರದ ಸಹಾಯಧನಕ್ಕಿಂತ ಹೆಚ್ಚಿನದನ್ನು ಫಲಾನುಭವಿಯ ಸ್ವಂತವಾಗಿ ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ
- ಯಂತ್ರವನ್ನು ಬೇರೆಯವರಿಗೆ ಬಾಡಿಗೆ/ಮಾರಾಟ ಮಾಡದಂತೆ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು.

--15

ಅನುಷ್ಠಾನ :-

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಜಂಟಿ/ ಉಪ / ಸಹಯಕ ನಿರ್ದೇಶಕರು, ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿ ಜವಳಿ ಅಭಿವೃದ್ಧಿ ಆಯುಕ್ತರಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು.

ಹಣ ಬಿಡುಗಡೆ :-

- ಘಟಕ ವೆಚ್ಚದ ಮೊತ್ತ ರೂ.4.50 ಲಕ್ಷಗಳಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನ ಗರಿಷ್ಠ ರೂ.4.05 ಲಕ್ಷಗಳಿಗೆ ಮೇಲ್ಪಟ್ಟು ಫಲಾನುಭವಿಯು ಸಾಲ ಪಡೆದ ಬ್ಯಾಂಕ್ / ಹಣಕಾಸು ಸಂಸ್ಥೆಗಳ ಮೂಲಕ ಅಥವಾ ಎಲೆಕ್ಟ್ರಾನಿಕ್ ಜಕಾರ್ಡ್‌ಗಳನ್ನು ಸರಬರಾಜು ಮಾಡುವ ಅಧಿಕೃತ ಡೀಲರ್ / ಏಜೆನ್ಸಿ ಮೂಲಕ ನಿಯಮಾನುಸಾರ ಬಿಡುಗಡೆ ಮಾಡುವುದು.
- ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳು ತನ್ನ ವಂತಿಕೆಯ ಶೇ.90 ರಷ್ಟು ಅಥವಾ ಅದಕ್ಕಿಂತ ಹೆಚ್ಚುವರಿ ಆಗಬಹುದಾದ ಮೊತ್ತವನ್ನು ಮುಂಗಡವಾಗಿ ಬ್ಯಾಂಕ್ ಖಾತೆಗೆ ಭರಿಸುವು ದನ್ನು ಜಿಲ್ಲಾಮಟ್ಟದ ಅಧಿಕಾರಿಯು ಖಾತರಿಪಡಿಸಿ ಕೊಳ್ಳುವುದು.

13. ನಾಟಿಂಗ್ ಮೆಷಿನ್ :

ಹಾಲಿ ವಿದ್ಯುತ್ ಮಗ್ಗಗಳನ್ನು ಹೊಂದಿರುವ ಘಟಕಗಳಿಗೆ ಅವಶ್ಯಕವಿರುವ ಹಳೆ ವಾರ್ಪ್ ಎಳೆಗಳನ್ನು ಹೊಸ ವಾರ್ಪ್ ಎಳೆಗಳೊಂದಿಗೆ ಸೇರಿಸಿ ಬೆಸೆಯಲು ಅನುಕೂಲವಾಗುವಂತೆ, ನಾಟಿಂಗ್ ಯಂತ್ರವನ್ನು ನೇಕಾರ ಸಹಕಾರ ಸಂಘಗಳ / ನೋಂದಾಯಿತ ಘಟಕಗಳ ಮುಖಾಂತರ ಸ್ಥಾಪಿಸಿ ಹೆಚ್ಚಿನ ಸಂಖ್ಯೆಯ ವಿದ್ಯುತ್ ಮಗ್ಗ ನೇಕಾರರಿಗೆ ನಾಟಿಂಗ್ ಮಾಡುವ ವ್ಯವಸ್ಥೆಯನ್ನು ಒದಗಿಸುವುದು. ಇದರಿಂದಾಗಿ ನೇಕಾರರು ಹೆಚ್ಚಿನ ಸಮಯವನ್ನು ಹಾಗೂ ಶ್ರಮ ವ್ಯಯ ಮಾಡುವುದನ್ನು ತಡೆದು ಹೆಚ್ಚಿನ ಬಟ್ಟೆ ಉತ್ಪಾದಿಸಲು ಅನುಕೂಲವಾಗುತ್ತದೆ.

ಅ) ಸರ್ಕಾರದ ಗರಿಷ್ಠ ಸಹಾಯಧನ - ರೂ.4,50,000/-
ಆ) ಫಲಾನುಭವಿಯ ವಂತಿಕೆ - ರೂ.50,000/-
ಇ) ಪ್ರತಿ ಘಟಕದ ಮೊತ್ತ - ರೂ. 5,00,000/-
ಈ) ಘಟಕ ವೆಚ್ಚದಲ್ಲಿ ಹೆಚ್ಚುವರಿಯಾದ ಮೊತ್ತವನ್ನು ಫಲಾನುಭವಿಯು / ಸಂಸ್ಥೆಗೆ ಭರಿಸುವುದು.

ಫಲಾನುಭವಿಗಳು :-

- ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದಲ್ಲಿ ಅದೇ ಜಿಲ್ಲೆಯಲ್ಲಿ ಸ್ಥಾಪನೆಯಾದ ನೇಕಾರ ಸಹಕಾರ ಸಂಘ/ ವಿವಿಧ್ದೋದ್ದೇಶ ನೇಕಾರರ ಸಹಕಾರ / ಸ್ವತಂತ್ರ ನೇಕಾರ ಘಟಕಗಳು ಕಾರ್ಯ ನಿರ್ವಹಿಸುತ್ತಿರಬೇಕು.
- ನೇಕಾರ ಫಲಾನುಭವಿಯು / ಸಂಸ್ಥೆ ಸ್ವಂತ ಘಟಕ ಹಾಗೂ ಸ್ವಂತ ವಿದ್ಯುತ್ ಮಗ್ಗ ಹೊಂದಿರಬೇಕು ಹಾಗೂ ಫಲಾನುಭವಿಯ ಹೆಸರಿನಲ್ಲಿ ವಿದ್ಯುತ್ ಸಂಪರ್ಕ ಹೊಂದಿರಬೇಕು. (ಈ ಬಗ್ಗೆ ದಾಖಲೆ ಒದಗಿಸಬೇಕು).

-16

- ಕನಿಷ್ಠ 10 ವಿದ್ಯುತ್ ಮಗ್ಗಗಳನ್ನು ಅಥವಾ 5 ಹೈಸ್ಪಿಡ್ ವಿದ್ಯುತ್ ಮಗ್ಗಗಳನ್ನು ಹೊಂದಿರಬೇಕು.
- ನೇಕಾರ ಫಲಾನುಭವಿಯು ಬಾಡಿಗೆ ಮನೆ / ಶೆಡ್‌ನಲ್ಲಿ ಸ್ವಂತ ವಿದ್ಯುತ್ ಮಗ್ಗ ಸ್ಥಾಪಿಸಿರುವವರು ಮನೆ / ಶೆಡ್ ಹಾಗೂ ವಿದ್ಯುತ್ ಸಂಪರ್ಕ ಬಾಡಿಗೆ ಆದಾರದ ಮೇಲೆ ಪಡೆದಿರುವ ಬಗ್ಗೆ ಕರಾರು ಪತ್ರ ಒದಗಿಸಬೇಕು.

ಹಣಕಾಸಿನ ನೆರವು :-

- ಘಟಕದ ವೆಚ್ಚ ಗರಿಷ್ಟ ಮೊತ್ತ ರೂ5.00 ಲಕ್ಷಗಳು (ನಾಟಿಂಗ್ ಮೆಷಿನ್)
- ಸರ್ಕಾರದ ಸಹಾಯಧನ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನ ಗರಿಷ್ಠ ರೂ.4.50 ಲಕ್ಷಗಳನ್ನು ಒದಗಿಸಲು ಉದ್ದೇಶಿಸಲಾಗಿದೆ.
- ಉಳಿದ ಮೊತ್ತವನ್ನು ನೇಕಾರ ಫಲಾನುಭವಿಯು ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಭರಿಸಲು ಶಕ್ತರಿರಬೇಕು.

ಫಲಾನುಭವಿಗಳಿಂದ ಪಡೆಯಬೇಕಾದ ದಾಖಲಾತಿಗಳು

- ಸಾಮಾನ್ಯ ಅರ್ಜಿ ನಮೂನೆಯಲ್ಲಿ ಫಲಾನುಭವಿಯ ಮಾಹಿತಿ.
- ಇತ್ತೀಚಿನ ಭಾವಚಿತ್ರ
- ವಿದ್ಯುತ್‌ಮಗ್ಗಗಳನ್ನು ಸ್ಥಾಪಿಸಿರುವ ಸ್ವಂತ / ಬಾಡಿಗೆ ಸ್ಥಳದ ದಾಖಲಾತಿ
- ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ. ಆರ್.ಆರ್. ನಂ.
- ಬ್ಯಾಂಕ್ / ಹಣಕಾಸಿನ ಸಂಸ್ಥೆಗಳಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ
- ಸರ್ಕಾರದ ಸಹಾಯಧನಕ್ಕಿಂತ ಹೆಚ್ಚಿನದನ್ನು ಫಲಾನುಭವಿಯು ಸ್ವಂತವಾಗಿ ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ.
- ಯಂತ್ರವನ್ನು ಬೇರೆಯವರಿಗೆ ಪರಬಾರೆ/ಮಾರಾಟ ಮಾಡದಂತೆ ಮುಚ್ಚಳಿಕೆ ಪತ್ರ ಪಡೆಯತಕ್ಕದ್ದು.

ಅನುಷ್ಠಾನ :-

- ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಜಂಟಿ/ ಉಪ / ಸಹಯಕ ನಿರ್ದೇಶಕರು, ಫಲಾನುಭವಿಗಳನ್ನು ನಿಯಮಾನುಸಾರ ಆಯ್ಕೆ ಮಾಡಿ ಜವಳಿ ಅಭಿವೃದ್ಧಿ ಆಯುಕ್ತರವರಿಂದ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದು.

ಹಣ ಬಿಡುಗಡೆ :-

- ಘಟಕ ವೆಚ್ಚದ ಮೊತ್ತ ರೂ.5.00 ಲಕ್ಷಗಳಲ್ಲಿ ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.90 ರಷ್ಟು ಸಹಾಯಧನ ಗರಿಷ್ಠ ರೂ.4.50 ಲಕ್ಷಗಳಿಗೆ ಮೇಲ್ಪಟ್ಟು ಫಲಾನುಭವಿಯು ಸಾಲ ಪಡೆದ ಬ್ಯಾಂಕ್ / ಹಣಕಾಸು ಸಂಸ್ಥೆಗಳ ಮೂಲಕ ಅಥವಾ ನಾಟಿಂಗ್ ಮಷಿನ್ ಸರಬರಾಜು ಮಾಡುವ ಅಧಿಕೃತ ಡೀಲರ್ / ಏಜೆನ್ಸಿ ಮೂಲಕ ನಿಯಮಾನುಸಾರ ಬಿಡುಗಡೆ ಮಾಡುವುದು.
- ಪರಿಶಿಷ್ಠ ಜಾತಿ / ಪರಿಶಿಷ್ಟ ಪಂಗಡಪ ಫಲಾನುಭವಿಗಳು ತನ್ನ ವಂತಿಕೆಯ ಶೇ.90 ರಷ್ಟು ಅಥವಾ ಅದಕ್ಕಿಂತ ಹೆಚ್ಚುವರಿ ಆಗಬಹುದಾದ ಮೊತ್ತವನ್ನು ಮುಂಗಡವಾಗಿ ಬ್ಯಾಂಕಿಗೆ ಭರಿಸಿರುವುದನ್ನು ಜಿಲ್ಲಾ ಮಟ್ಟದ ಅಧಿಕಾರಿಯು ಖಾತರಿ ಪಡಿಸಿಕೊಳ್ಳತಕ್ಕದ್ದು.

## 14. ಎಕ್ಸ್‌ಪ್ರೆಸ್ ಫೀಡರ್

ಜಿಲ್ಲಾ ಮಟ್ಟದ ಅಧಿಕಾರಿಗಳು ನಿಯಮಾನುಸಾರ ನೇಕಾರರ ಸಾಂದ್ರತೆ ಇರುವ ಪ್ರದೇಶದ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾರ್ಗಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ದಾಖಲಾತಿಗಳನ್ನು ಪಡೆದು ಪ್ರತ್ಯೇಕವಾಗಿ ಫಲಾನುಭವಿಯ ವಿವರಗಳೊಂದಿಗೆ ಅರ್ಹತೆಯನ್ನು ದೃಡೀಕರಿಸಿ ಹಾಗೂ ಸ್ಥಳೀಯ ವಿದ್ಯುತ್ ಸರಬರಾಜು ಕಂಪನಿಯಿಂದ ಎಕ್ಸ್‌ಪ್ರೆಸ್ ಫೀಡರ್ ಅಳವಡಿಸಲು ಬೇಕಾಗುವ ಅಂದಾಜು ವೆಚ್ಚದ ಪಟ್ಟಿ ಹಾಗೂ ನೀಲಿ ನಕ್ಷೆಯನ್ನು ಮಂಜೂರಾತಿಗೆ ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವುದು.

**ಅರ್ಹತೆ :**

1) ವಿದ್ಯುತ್ ಮಗ್ಗ ನೇಯ್ಗೆ ಚಟುವಟಿಕೆಯಲ್ಲಿ ತೊಡಗಿರುವ ಪ್ರದೇಶವಾಗಿರಬೇಕು.
2) ಕನಿಷ್ಟ 50 ವಿದ್ಯುತ್ ಮಗ್ಗಗಳು ಇರುವ ಪ್ರದೇಶವಾಗಿರಬೇಕು.
3) ಅಸಂಘಟಿತ ವಲಯ, ಸಹಕಾರ ಸಂಘ / ಸಂಸ್ಥೆಗಳಲ್ಲಿ ನೊಂದಾಯಿತ ಹಾಗೂ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿರುವ ನೇಕಾರರು ಮತ್ತು ಸಂಘಟಿತ ವಲಯದ ಫಲಾನುಭವಿಗಳು.

**ಪ್ರಸ್ತಾವನೆಗೆ ದಾಖಲಾತಿಗಳು:**

1) ನಮೂನೆಯಲ್ಲಿ ನೇಕಾರರ ಮಾಹಿತಿ.
2) ವಿದ್ಯುತ್‌ಮಗ್ಗ ಘಟಕಗಳ ವಿವರ
3) ವಿದ್ಯುತ್ ಸಂಪರ್ಕ ಹೊಂದಿರುವ ದಾಖಲಾತಿ
4) ವಿದ್ಯುತ್ ಸರಬರಾಜು ಕಂಪನಿಯಿಂದ ಪಡೆದಿರುವ ಅನುಮೋದಿತ ಅಂದಾಜು ವೆಚ್ಚಪಟ್ಟಿ ಮತ್ತು ನೀಲಿ ನಕ್ಷೆ.

**ಅನುಷ್ಠಾನ:**

1) ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾಮಟ್ಟದ ಉಪ ನಿರ್ದೇಶಕರು / ಸಹಾಯಕ ನಿರ್ದೇಶಕರು ವಿದ್ಯುತ್ ಮಗ್ಗ ನೇಕಾರರ ಸಾಂದ್ರತೆ ಇರುವ ಪ್ರದೇಶಗಳನ್ನು ಗುರುತಿಸಿ ಯೋಜನೆ ಅನುಷ್ಠಾನಗೊಳಿಸುವುದು.
2) ಫಲಾನುಭವಿಗಳ ಮಾಹಿತಿ ಹಾಗೂ ವಿದ್ಯುತ್ ಸರಬರಾಜು ಕಂಪನಿಯಿಂದ ಪಡೆದಿರುವ ಅನುಮೋದಿತ ಅಂದಾಜು ವೆಚ್ಚಪಟ್ಟಿ ಮತ್ತು ನೀಲಿ ನಕ್ಷೆಯೊಂದಿಗೆ ಕೇಂದ್ರ ಕಛೇರಿಗೆ ಸೂಕ್ತ ಶಿಫಾರಸ್ಸು ಮಾಡುವುದು.
3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಂತೆ ಅನುಷ್ಠಾನಗೊಳಿಸುವುದು.
4) ಯೋಜನೆ ಅನುಷ್ಠಾನದ ನಂತರ ಬಿಡುಗಡೆ ಮಾಡಲಾದ ಸಂಪೂರ್ಣ ಮೊತ್ತಕ್ಕೆ ಹಣಬಳಕೆ ಪ್ರಮಾಣಪತ್ರ ಸಲ್ಲಿಸುವುದು.
5) ಯೋಜನೆ ಅನುಷ್ಠಾನದ ಬಗ್ಗೆ ಛಾಯಾ ಚಿತ್ರಗಳನ್ನು ಕಡತದಲ್ಲಿ ದಾಖಲಿಸುವುದು.

**ಹಣ ಬಿಡುಗಡೆ:**

1) ಕಾಮಗಾರಿಯ ಪ್ರಗತಿಯನ್ನಾಧರಿಸಿ ಎರಡು ಹಂತಗಳಲ್ಲಿ ನಿಯಮಾನುಸಾರ ಅಧಿಕೃತ ಗುತ್ತಿಗೆದಾರರಿಗೆ ಹಣಬಿಡುಗಡೆ ಮಾಡುವುದು.

--18

## 15. ನೇಕಾರರ ಕಾಲೋನಿಗಳನ್ನು ಅಭಿವೃದ್ಧಿಪಡಿಸುವುದು

ಉದ್ದೇಶ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರು ವಾಸಿಸುವ ಪ್ರದೇಶದಲ್ಲಿ ಹಾಗೂ ಹೆಚ್ಚು ಜನ ಸಾಂದ್ರತೆಯನ್ನು ಹೊಂದಿರುವ ವ್ಯಾಪ್ತಿಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆಯನ್ನು ನೀಗಿಸಲು ಕನಿಷ್ಠ ಒಂದು ಎಕರೆ ಪ್ರದೇಶದಲ್ಲಿ ಅಸಂಘಟಿತ ವಲಯದ ಅಥವಾ ಸಂಘಟಿತ ವಲಯದ ನೇಕಾರರಿಗೆ ಅನುಕೂಲವಾಗುವಂತೆ ರಸ್ತೆ ಅಭಿವೃದ್ದಿಪಡಿಸುವುದು, ಒಳಚರಂಡಿ ನಿರ್ಮಾಣ, ದಾರಿ ದೀಪಗಳನ್ನು ಅಳವಡಿಸುವುದು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಸೌಲಭ್ಯಗಳನ್ನು ಒದಗಿಸಿ ಮಾದರಿ ಕಾಲೋನಿಗಳಾಗಿ ಅಭಿವೃದ್ಧಿಪಡಿಸಲು ಹಾಗೂ ನಿವೇಶನ ರಹಿತರಿಗೆ ನಿವೇಶನ ಹಂಚುವ ಕಾರ್ಯಕ್ರಮವನ್ನು ರೂಪಿಸಿದೆ. ಇದರಿಂದ ಒಂದೇ ಪ್ರದೇಶದಲ್ಲಿ ಕನಿಷ್ಟ 20 ಕುಟುಂಬಗಳು ವಾಸಿಸುವ ಸ್ಥಳಗಳಲ್ಲಿ ಈ ಸೌಲಭ್ಯಗಳನ್ನು ಒದಗಿಸುವುದರಿಂದ ಆಧುನಿಕ ಕಾಲೋನಿಗಳಾಗಿ ಪರಿವರ್ತಿಸಬಹುದು.

**ಯೋಜನಾ ಮೊತ್ತದ ವಿವರ :**

1. ಸರ್ಕಾರದ ಗರಿಷ್ಠ ಸಹಾಯಧನ ರೂ.20.00 ಲಕ್ಷ
2. ಅಂದಾಜು ವೆಚ್ಚದ ಹೆಚ್ಚುವರಿ ಮೊತ್ತವನ್ನು ಸಂಸ್ಥೆಗಳು ಭರಿಸುವುದು.

**ಅರ್ಹತೆಗಳು:**

1. ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಕಾಯ್ದೆ ಮತ್ತು ನಿಯಮಗಳನ್ವಯ ನೊಂದಾಯಿಸಲ್ಪಟ್ಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರ ಸಹಕಾರ ಸಂಘಗಳು
2. ಸಂಘಟಿತ ಮತ್ತು ಅಸಂಘಟಿತ ವಲಯದ ಫಲಾನುಭವಿಗಳು ಇದರ ವ್ಯಾಪ್ತಿಯಲ್ಲಿ ಸಾಮೂಹಿಕ ಮೂಲಭೂತ ಸೌಲಭ್ಯಗಳನ್ನು ಪಡೆಯಬಹುದು.

**ಪ್ರಸ್ತಾವನೆಯ ದಾಖಲಾತಿಗಳು:**

1) ಸಂಸ್ಥೆಯು ಹೊಂದಿರುವ ಖಾಲಿ ಜಾಗದ ಅಥವಾ ಖರೀದಿಗೆ ಕರಾರು ಒಡಂಬಡಿಕೆಯ ಭೂ ದಾಖಲೆ ಪತ್ರಗಳು ಮತ್ತು ಆರ್.ಟಿ.ಸಿ ಖಾತಾ ಪ್ರತಿ.
2) ಪ್ರದೇಶಾಭಿವೃದ್ಧಿಯ ನೀಲಿ ನಕ್ಷೆ
3) ವಿವರವಾದ ಅಂದಾಜು ವೆಚ್ಚದ ಪಟ್ಟಿ.
4) ಸಂಘದ ನೊಂದಾಣಿ ಪ್ರಮಾಣ ಪತ್ರದ ಪ್ರತಿ.
5) ಅನುಬಂಧ – 1 ರಿಂದ 29 ರಲ್ಲಿ ಸಂಸ್ಥೆಯ ಮಾಹಿತಿ.
6) ಕಾರ್ಯಕಾರಿ ಮಂಡಳಿ ನಿರ್ದೇಶಕರ ಹೆಸರು ಮತ್ತು ವಿಳಾಸ.
7) ಆಡಳಿತ ಮಂಡಳಿ ಠರಾವು ಪ್ರತಿ.
8) ಹಿಂದಿನ ಮೂರು ವರ್ಷಗಳ ಆಡಿಟ್ ವರದಿ.
9) ನೊಂದಾಯಿತ ಸದಸ್ಯರ ಪಟ್ಟಿ.
10) ನಿವೇಶನ ಹಂಚಿಕೆಗೆ ಆಯ್ಕೆ ಮಾಡಲಾದ ಫಲಾನುಭವಿಗಳ ಪಟ್ಟಿ (ನಿವೇಶನರಹಿತ / ವಸತಿ ರಹಿತ).
11) ಯೋಜನಾ ವರದಿ.
12) ಈ ಅನುದಾನದಲ್ಲಿ ಅಭಿವೃದ್ಧಿಪಡಿಸಿದ ಆಸ್ತಿಯನ್ನು ಪರಬಾರೆ ಮಾಡುವುದಿಲ್ಲವೆಂಬ ಮುಚ್ಚಳಿಕೆ ಪತ್ರ.

-20

ಜಿಲ್ಲಾ ಮಟ್ಟದಲ್ಲಿ ಯೋಜನೆಯ ಕಾರ್ಯಗತಗೊಳಿಸಲು ಹಣ ಬಿಡುಗಡೆ :

- ಉದ್ದೇಶಿತ ಹಾಗೂ ಮಾದರಿ ನೇಕಾರರ ಕಾಲೋನಿ ಅಭಿವೃದ್ಧಿ ಪಡಿಸಲು ಹಾಗೂ ಅಗತ್ಯ ಮೂಲಭೂತ ಸೌಕರ್ಯಗಳನ್ನು ನಿರ್ಮಿಸುವಲ್ಲಿ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಕನಿಷ್ಠ 5 ಕಂತುಗಳಲ್ಲಿ ಮೊದಲನೆ ಕಂತು ಶೇ.20, ಎರಡನೇ ಕಂತು ಶೇ.20, ಮೂರನೇ ಕಂತು ಶೇ.20, ನಾಲ್ಕನೇ ಕಂತು ಶೇ.20 ಮತ್ತು ಐದನೇ ಕಂತು ಶೇ.20ರಷ್ಟು ಹಣವನ್ನು ಸಿವಿಲ್ ಕಂಟ್ರಾಕ್ಟರ್ ಹೆಸರಿನಲ್ಲಿ ಅಥವಾ ಸಹಕಾರ ಸಂಘ - ಸಂಸ್ಥೆಗಳ ಹೆಸರಿನಲ್ಲಿ ಬಿಡುಗಡೆ ಮಾಡುವುದು.
- ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮವನ್ನು ಪಾಲಿಸುವುದು.
- ಪ್ರತಿ ಕಾಂಪೊನೆಂಟ್‌ವಾರು ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಕಾಲಕಾಲಕ್ಕೆ ಸ್ಥಳ ಪರಿಶೀಲಿಸಿ ಗುಣ ಮಟ್ಟವನ್ನು ಖಾತ್ರಿ ಪಡಿಸಿಕೊಂಡು ಹಣ ಬಿಡುಗಡೆ ಮಾಡುವುದು.

16. ಸೈಜಿಂಗ್ ಘಟಕ:

ಈ ಕಾಂಪೋನೆಂಟ್‌ಗೆ ಸಂಬಂಧಿಸಿದಂತೆ, ಸರ್ಕಾರದ ಸಹಾಯಧನವನ್ನು ಈ ಕೆಳಕಂಡಂತೆ ಒದಗಿಸುವುದು.

- ಯೋಜನಾ ಮೊತ್ತದ ಶೇ. 90 ರಷ್ಟು ಅಥವಾ ಗರಿಷ್ಠ ರೂ.500.00 ಲಕ್ಷಗಳನ್ನು ಒದಗಿಸುವುದು. ಉಳಿದ ಮೊತ್ತವನ್ನು ಎಸ್.ಪಿ.ವಿ.ಯು ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಭರಿಸುವುದು.
- ಉಳಿದಂತೆ ಸೈಜಿಂಗ್ ಘಟಕ ಸ್ಥಾಪಿಸುವ ಬಗ್ಗೆ ಹೊರಡಿಸಲಾಗಿರುವ ಮಾರ್ಗಸೂಚಿಯ ಎಲ್ಲಾ ಅಂಶಗಳು ಅನ್ವಯಿಸುತ್ತವೆ.

## 17. ಮಿನಿ ಪವರ್ ಲೂಂ ಪಾರ್ಕ್:

ಉದ್ದೇಶ: ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಅವರ ವರಮಾನ ಮಟ್ಟವನ್ನು ಹೆಚ್ಚಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಮಿನಿ ಪವರ್‌ಲೂಂ ಪಾರ್ಕ್ ಸ್ಥಾಪಿಸುವ ಯೋಜನೆ ಅನುಷ್ಠನಗೊಳಿಸಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆಗೆ ಹಾಗೂ ಅವರ ಅಭಿವೃದ್ಧಿಗೆ ಕಾಲಬದ್ಧವಾಗಿ ಕಾರ್ಯಕ್ರಮವನ್ನು ಜಾರಿಗೊಳಿಸಲು, ಹಾಗೂ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಉದ್ದೇಶಿಸಿದೆ. ಕಾರ್ಯಕ್ರಮ ಅನುಷ್ಠಾನಗೊಳಿಸಲು ಅನುಸರಿಸಬೇಕಾದ ಕಾರ್ಯವಿಧಾನ ಈ ಕೆಳಕಂಡಂತಿರುತ್ತದೆ.

ಅರ್ಹತೆ :

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯುತ್‌ಮಗ್ಗ ನೇಕಾರರು ಒಂದು ಎಸ್.ಪಿ.ವಿ ನೊಂದಾಯಿಸಿಕೊಂಡು ಅದರ ಮೂಲಕ ಈ ಮುಂದಿನ ಷರತ್ತುಗಳಿಗೊಳಪಟ್ಟು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅರ್ಹವಾಗಿರುತ್ತದೆ.
- ಜವಳಿ ಕೈಗಾರಿಕಾ ಉದ್ಯಮದಲ್ಲಿ ಅನುಭವ ಇದ್ದು, ಆಸಕ್ತಿ ಇರುವ ಕನಿಷ್ಠ 15 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳು ಇರತಕ್ಕದ್ದು.
- ಅಭಿವೃದ್ಧಿ ಪಡಿಸುತ್ತಿರುವ ಪವರ್ ಲೂಂ ಪಾರ್ಕ್ ಕನಿಷ್ಟ 2 ಎಕರೆ ಜಮೀನು/ನಿವೇಶನ ಹೊಂದಿರತಕ್ಕದ್ದು ಹಾಗೂ ಸದರಿ ಭೂಮಿಯು ಎಸ್.ಪಿ.ವಿ ಹೆಸರಿನಲ್ಲಿ ನೊಂದಣಿಯಾಗಿರಬೇಕು.

ಮೂಲಭೂತ ಸೌಲಭ್ಯಗಳು :-

- ರಸ್ತೆ.
- ಒಳ ಚರಂಡಿ ವ್ಯವಸ್ಥೆ.
- ನೀರು ಸರಬರಾಜು.
- ವಿದ್ಯುತ್ ಸರಬರಾಜು (ಎಕ್ಸ್‌ಪ್ರೆಸ್ ಫೀಡರ್, ಬೀದಿ ದೀಪ, ಇತರೆ).
- ಕನಿಷ್ಠ 2000 ಚ.ಅಡಿ ನಿವೇಶನ (15 ನಿವೇಶನಗಳು).
- ಪ್ರತಿ ನಿವೇಶನದಲ್ಲಿ ತಲಾ ಕನಿಷ್ಠ 1000 ಚ.ಅಡಿ ಷೆಡ್ ನಿರ್ಮಾಣ ಮಾಡಬೇಕು,
- ಅವಶ್ಯಕತೆಗನುಗುಣವಾಗಿ ಇತರೆ ಮೂಲಭೂತ ಸೌಲಭ್ಯಗಳು.

ಸಾಮಾನ್ಯ ಸೌಲಭ್ಯಗಳು:-

- ಮಗ್ಗಪೂರ್ವ ಘಟಕದ ಕಟ್ಟಡ ನಿರ್ಮಾಣ
- ಮಗ್ಗಪೂರ್ವ ಯಂತ್ರಗಳ ಸ್ಥಾಪನೆ.
- ಗೋದಾಮು/ದಾಸ್ತಾನು ಮಳಿಗೆ ನಿರ್ಮಾಣ.

**ಮೂಲಭೂತ ಸೌಲಭ್ಯಗಳು ಘಟಕ ವೆಚ್ಚ (ಅಂದಾಜು):**

| | | (ರೂ.ಲಕ್ಷಗಳಲ್ಲಿ) |
|---|---|---|
| 1 | ರಸ್ತೆ | 20.00 |
| 2 | ಒಳ ಚರಂಡಿ ವ್ಯವಸ್ಥೆ | 5.00 |
| 3 | ವಿದ್ಯುತ್ ಸರಬರಾಜು | ~~15.00~~ |
| 4 | ಬಾರ್ಬೆಡ್ ವೈರ್ ಫೆನ್ಸಿಂಗ್ | 5.00 |
| 5 | ನೀರು ಸರಬರಾಜು | 7.00 |
| 6 | ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಾಣ (1500 ಚ.ಅಡಿ ಕಟ್ಟಡ) ಹಾಗೂ ಮಗ್ಗ ಪೂರ್ವ ಯಂತ್ರೋಪಕರಣಗಳು (ವಾರ್ಪಿಂಗ್, ವೈಂಡಿಂಗ್ ಹಾಗೂ ಇತರೆ ಅವಶ್ಯವಿರುವ ಯಂತ್ರೋಪಕರಣಗಳು) | 20.00 |
| 7 | ಗೋದಾಮು (1000 ಚ.ಅಡಿ) | 8.00 |
| ~~8~~ | ~~ಸಂಚಾರಿ ಮಾರುಕಟ್ಟೆ ವಾಹನ~~ | 05.00 |
| 9 | 15 ಷೆಡ್‌ಗಳ ನಿರ್ಮಾಣ (1ಷೆಡ್=1000 ಚ.ಅಡಿ) | 120.00 |
| 10 | ವಿದ್ಯುತ್ ಮಗ್ಗಗಳು ಹಾಗೂ ಸಲಕರಣೆಗಳು (ಪ್ರತಿ ಶೆಡ್ಡಿನಲ್ಲಿ 4 ಸಾದಾರಣ/3 ಸೆಮಿಆಟೋ/ 2 ಆಟೋ ವಿದ್ಯುತ್ ಮಗ್ಗಗಳು) | 95.00 |
| | **ಒಟ್ಟು ಯೋಜನಾ ವೆಚ್ಚ** | **300.00** |

**ಯೋಜನೆಯ ಆರ್ಥಿಕ ಮೂಲ :-**

ಸರ್ಕಾರದ ಸಹಾಯಧನ ಯೋಜನಾ ಮೊತ್ತದ ಶೇ. 90 ರಷ್ಟು ಅಥವಾ ಗರಿಷ್ಟ ರೂ.300.00 ಲಕ್ಷಗಳನ್ನು ಒದಗಿಸುವುದು. ಉಳಿದ ಮೊತ್ತವನ್ನು ಎಸ್.ಪಿ.ವಿ.ಯು ಬ್ಯಾಂಕ್/ಹಣಕಾಸು ಸಂಸ್ಥೆಗಳಿಂದ ಭರಿಸುವುದು.

**ಸ್ಪೆಷಲ್ ಪರ್ಪಸ್ ವೆಹಿಕಲ್‌ನ(ಎಸ್.ಪಿ.ವಿ) ಪಾತ್ರ :**

1. ಪವರ್‌ಲೂಂ ಪಾರ್ಕ್‌ನ್ನು ಉಪಯೋಗಿಸುವ 15 ಫಲಾನುಭವಿಗಳು ಎಸ್.ಪಿ.ವಿ. ನೋಂದಾಯಿಸಿ, ಅದರ ಮೂಲಕ ಈ ಯೋಜನೆಯನ್ನು ಅನುಷ್ಠಾನಗೊಳಿಸುವುದು.
2. ಯೋಜನೆಯ ರೂಪುರೇಷೆ, ಹಣಕಾಸಿನ ವ್ಯವಸ್ಥೆ ಹಾಗೂ ನಿರ್ವಹಣೆ ಮತ್ತು ಅನುಷ್ಠಾನದ ಸಂಪೂರ್ಣ ಜವಾಬ್ದಾರಿಯು ಎಸ್.ಪಿ.ವಿ.ಯದ್ದಾಗಿರುತ್ತದೆ.
3. ಪಾರ್ಕ್‌ನ ನಿರ್ವಹಣಾ ವೆಚ್ಚವನ್ನು ಸದಸ್ಯ ಘಟಕಗಳಿಂದ ಸಂಗ್ರಹಿಸಬಹುದು.
4. ಸರ್ಕಾರವು ಯೋಜನೆಗೆ ಆರ್ಥಿಕ ಸಹಾಯ ಒದಗಿಸಿ ಮಂಜೂರಾತಿ ನೀಡಿದ ಕೂಡಲೇ ಎಸ್.ಪಿ.ವಿ.ಯ ಆಡಳಿತ ಮಂಡಳಿಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಯು ಸರ್ಕಾರದ ಪ್ರತಿನಿದಿಯಾಗಿ ನಾಮ ನಿರ್ದೇಶನ ಮಾಡತಕ್ಕದ್ದು.
5. ಮೂಲಭೂತ ಸೌಲಭ್ಯ ಅಭಿವೃದ್ಧಿಯ ಕಟ್ಟಡ ಕಾಮಕಾರಿ ಹಾಗೂ ಯಂತ್ರೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮವನ್ನು ಪಾಲಿಸಿ ಅನುಷ್ಠಾನಗೊಳಿಸುವುದು.
6. ಅನುಮೋದಿತ ಯೋಜನಾ ವರದಿಯಂತೆಯೇ ಯೋಜನೆಯನ್ನು ಅನುಷ್ಟಾನಗೊಳಿಸತಕ್ಕದ್ದು.

**ಪ್ರಸ್ತಾವನೆಯ ದಾಖಲಾತಿಗಳು:**

1. ವಿವರವಾದ ಯೋಜನಾ ವರದಿ (ಡಿಪಿಆರ್)
2. ಎಸ್.ಪಿ.ವಿ. ನೋಂದಣಿ ಪ್ರಮಾಣ ಪತ್ರದ ಪ್ರತಿ.
3. ಮೆಮೊರ್‍ಯಾಂಡ್‌ಂ ಆಫ್ ಆರ್ಟಿಕಲ್ಸ್ ಪ್ರತಿ.
4. ಆಡಳಿತ ಮಂಡಳಿಯ ಠರಾವು ಪ್ರತಿ.
5. ಆಡಳಿತ ಮಂಡಳಿ ನಿರ್ದೇಶಕರ ಪಟ್ಟಿ.
6. ಖಾಲಿ ನಿವೇಶನದ ದಾಖಲಾತಿಗಳು (ಸೇಲ್/ಲೀಸ್ ಡೀಡ್, ಪಹಣಿ, ಇ.ಸಿ.)
7. ಕಟ್ಟಡದ ಅಂದಾಜು ಪಟ್ಟಿ.
8. ಕಟ್ಟಡದ ನಕ್ಷೆ.
9. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಸಂಸ್ಥೆಯು ಭರಿಸುವ ಬಗ್ಗೆ ಮುಚ್ಚಳಿಕೆ ಪತ್ರ

**ಯೋಜನೆಗಳನ್ನು ಕಾರ್ಯಗತಗೊಳಿಸಲು ಹಣ ಬಿಡುಗಡೆ ವಿಧಾನ.**

ಎ) ಕಾಮಗಾರಿಗಳ ಪ್ರಗತಿಯನ್ನು ಆಧರಿಸಿ, 3 ಹಂತಗಳಲ್ಲಿ ಹಣ ಬಿಡುಗಡೆ ಮಾಡುವುದು.
ಬಿ) ಪ್ರತಿ ಹಂತದ ಕಾಮಗಾರಿಗೆ ಸಂಬಂಧಿಸಿದಂತೆ ಛಾಯಾ ಚಿತ್ರಗಳನ್ನು ಎಸ್.ಪಿ.ವಿ.ಯಿಂದ ಪಡೆಯತಕ್ಕದ್ದು.
ಸಿ) ಕಾಮಗಾರಿ ಮುಕ್ತಾಯದ ನಂತರ ಅಧಿಕೃತ ಇಂಜಿನಿಯರ್‌ನಿಂದ ದೃಢೀಕರಣ ಪತ್ರ ಪಡೆದು ಅಂತಿಮ ಕಂತನ್ನು ಬಿಡುಗಡೆ ಮಾಡತಕ್ಕದ್ದು.
ಡಿ) ಯಂತ್ರೋಪಕರಣಗಳ ಖರೀದಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಯು ಪರಿಶೀಲಿಸಿ, ದೃಢೀಕರಿಸಿದ ನಂತರ ಹಣ ಬಿಡುಗಡೆ ಮಾಡತಕ್ಕದ್ದು.

<u>ಷರತ್ತು ಮತ್ತು ನಿಬಂಧನೆಗಳು</u>

1. ಫಲಾನುಭವಿ ಸಂಸ್ಥೆಯ ಆಯ್ಕೆಯಲ್ಲಿ ಇಲಾಖೆಯ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿ, ಜಂಟಿ ನಿರ್ದೇಶಕರು, ತಾಂತ್ರಿಕ ಅನುಭವ ಇರುವ ತಜ್ಞರು ಒಳಗೊಂಡಂತೆ ಜವಳಿ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ, ಸಮಿತಿ ಸಭೆಯಲ್ಲಿ ಪ್ರಸ್ತಾವನೆಯ ಅರ್ಹತೆ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಆಯ್ಕೆ ಮಾಡತಕ್ಕದ್ದು.
2. ಸಂಸ್ಥೆಗೆ ಹಣ ಮಂಜೂರಾದ 06 ತಿಂಗಳ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು.
3. ಘಟಕಕ್ಕೆ ತಗಲುವ ಯೋಜನಾ ವೆಚ್ಚದಲ್ಲಿ ಶೇ.10ರಷ್ಟು ಫಲಾನುಭವಿ ಸಂಸ್ಥೆ ಕಡ್ಡಾಯವಾಗಿ ಭರಿಸತಕ್ಕದ್ದು.
4. ಯೋಜನೆಯ ಅನುಷ್ಠಾನಕ್ಕೆ ಅವಶ್ಯಕವಿರುವ ವಿವಿಧ ಇಲಾಖೆಗಳ ಅನುಮತಿಗಳನ್ನು ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
5. ಕಟ್ಟಡ ಕಾಮಗಾರಿಗಳಿಗೆ ಸ್ಥಳೀಯ ಸಂಸ್ಥೆಗಳಿಂದ ಅವಶ್ಯವಿರುವ ಅನುಮೋದನೆ ಪಡೆಯತಕ್ಕದ್ದು.
6. ಸರ್ಕಾರದಿಂದ ಮಂಜೂರು ಮಾಡುವ ಅನುದಾನವನ್ನು ಯಾವ ಉದ್ದೇಶಕ್ಕೆ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಕಡ್ಡಾಯವಾಗಿ ವಿನಿಯೋಗ ಮಾಡತಕ್ಕದ್ದು.
7. ಅನುಮೋದಿತ ಯೋಜನಾ ವರದಿಯಂತೆಯೇ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.
8. ಯೋಜನೆ ಅನುಷ್ಠಾನದ ಯಾವುದೇ ಹಂತದಲ್ಲಿ ಸ್ಥಳ/ಕಾಮಗಾರಿ ಪರಿಶೀಲನೆ ಹಕ್ಕನ್ನು ಇಲಾಖೆಯು ಹೊಂದಿರುತ್ತದೆ.
9. ಪ್ರತಿ ಷೆಡ್‌ನಲ್ಲಿ ಕನಿಷ್ಠ 4 ಸಾದಾ ವಿದ್ಯುತ್ ಮಗ್ಗಗಳನ್ನು ಅಳವಡಿಸಿ ಉತ್ಪಾದನೆ ಕೈಗೊಳ್ಳತಕ್ಕದ್ದು.
10. ಅನುಮೋದಿತ ಯೋಜನಾ ವರದಿಯಲ್ಲಿ ಬದಲಾವಣೆಗಳಿದ್ದಲ್ಲಿ ಜವಳಿ ಅಭಿವೃದ್ಧಿ ಆಯುಕ್ತರ ಪೂರ್ವಾನುಮತಿ ಪಡೆದು ಅನುಷ್ಠಾನಗೊಳಿಸತಕ್ಕದ್ದು.
11. ಫಲಾನುಭವಿ ಸಂಸ್ಥೆ ಹಾಗೂ ಫಲಾನುಭವಿಗಳಿಂದ ಸರ್ಕಾರವು ನಿಗದಿಪಡಿಸುವ ನಮೂನೆಯಲ್ಲಿ ಷರತ್ತು ಮತ್ತು ನಿಬಂಧನೆಗಳಿಗೆ ಒಪ್ಪಿಗೆ ನೀಡಿದ ಬಾಂಡ್‌ನ್ನು ನೀಡತಕ್ಕದ್ದು.
12. ಯೋಜನೆ ಅನುಷ್ಠಾನ ಹಾಗೂ ನಿರ್ವಹಣೆ ಸಂಬಂಧಿಸಿದಂತೆ ಸದರಿ ಜಿಲ್ಲೆಯ ಕೈಮಗ್ಗ ಮತ್ತು ಜವಳಿ ಇಲಾಖೆಯ ಜಂಟಿ ನಿರ್ದೇಶಕರು/ಉಪನಿರ್ದೇಶಕರು/ಸಹಾಯಕ ನಿರ್ದೇಶಕರು ಇವರು ಉಸ್ತುವಾರಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು.
13. ಉದ್ದೇಶಿತ ಪೂರ್ಣ ಯೋಜನೆಯ ಟೆಂಡರ್ ಪ್ರಕ್ರಿಯೆಗೆ ಜವಳಿ ಅಭಿವೃದ್ಧಿ ಅಯುಕ್ತರವರ ಅನುಮತಿ ಪಡೆಯತಕ್ಕದ್ದು.
14. ಘಟಕ ವೆಚ್ಚಕ್ಕಿಂತ ಹೆಚ್ಚುವರಿಯಾದ ಮೊತ್ತವನ್ನು ಎಸ್.ಪಿ.ವಿ.ಯವರೇ ಭರಿಸಲು ಆಡಳಿತ ಮಂಡಳಿಯ ಠರಾವಿನೊಂದಿಗೆ ಖಾತ್ರಿ ನೀಡತಕ್ಕದ್ದು.
14. ಉದ್ದೇಶಿತ ಕಟ್ಟಡವನ್ನು ವಿದ್ಯುತ್‌ಮಗ್ಗ ನೇಕಾರರು ವಿದ್ಯುತ್ ಮಗ್ಗ ಘಟಕ/ಮಗ್ಗಪೂರ್ವ ಘಟಕ ಸ್ಥಾಪಿಸಲು ಮಾತ್ರ ಹಂಚಿಕೆ ಮಾಡುವುದು.
15. ಸರ್ಕಾರವು ಕಾಲಕಾಲಕ್ಕೆ ವಿಧಿಸಬಹುದಾದ ಇತರೆ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಡತಕ್ಕದ್ದು.

(ಕೆ. ಬೋರಲಿಂಗಯ್ಯ)
ಸರ್ಕಾರದ ಉಪಕಾರ್ಯದರ್ಶಿ(ಜವಳಿ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ